ಶಾಲಾ ಶಿಕ್ಷಣ ಇಲಾಖೆ

ನಲಿಕಲಿ

ಅಭ್ಯಾಸ ಸಹಿತ ಪಠ್ಯಪುಸ್ತಕ

ಪರಿಸರ ಅಧ್ಯಯನ

ಭಾಗ – 1

3

ಮೂರನೇ ತರಗತಿ

@KTBS NOT TO BE REPUBLISHED

ಸಮಗ್ರ ಶಿಕ್ಷಣ, ಕರ್ನಾಟಕ
ನೃಪತುಂಗ ರಸ್ತೆ
ಬೆಂಗಳೂರು – 560 001

ಕರ್ನಾಟಕ ಪಠ್ಯಪುಸ್ತಕ ಸಂಘ
6ನೇ ಅಡ್ಡರಸ್ತೆ, ಮಲ್ಲೇಶ್ವರಂ
ಬೆಂಗಳೂರು – 560 003

ಸಾಹಿತ್ಯ ಪರಿಕಲ್ಪನೆ

ಶ್ರೀ ವಿಕಾಸ್ ಕಿಶೋರ್ ಸುರಳ್ಕರ್ ಭಾ.ಆ.ಸೇ. ಆಯುಕ್ತರು ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು	**ಡಾ. ಕೆ. ವಿದ್ಯಾಕುಮಾರಿ** ಭಾ.ಆ.ಸೇ. ರಾಜ್ಯ ಯೋಜನಾ ನಿರ್ದೇಶಕರು ಸಮಗ್ರ ಶಿಕ್ಷಣ ಕರ್ನಾಟಕ

ಶ್ರೀ ಮಾರುತಿ ಎಂ.ಆರ್. ನಿರ್ದೇಶಕರು (ಗುಣಮಟ್ಟ) ರಾಜ್ಯ ಯೋಜನಾ ನಿರ್ದೇಶಕರ ಕಛೇರಿ ಸಮಗ್ರ ಶಿಕ್ಷಣ ಕರ್ನಾಟಕ	**ಶ್ರೀ ಕೆ. ಮಂಜುನಾಥ** ಸಹ ನಿರ್ದೇಶಕರು (ಗುಣಮಟ್ಟ ಖಾತ್ರಿ – ಪ್ರಭಾರಿ) ರಾಜ್ಯ ಯೋಜನಾ ನಿರ್ದೇಶಕರ ಕಛೇರಿ ಸಮಗ್ರ ಶಿಕ್ಷಣ ಕರ್ನಾಟಕ	**ಶ್ರೀ ಬಿ. ಚಂದ್ರಶೇಖರ** ಹಿರಿಯ ಕಾರ್ಯಕ್ರಮಾಧಿಕಾರಿ ರಾಜ್ಯ ಯೋಜನಾ ನಿರ್ದೇಶಕರ ಕಛೇರಿ ಸಮಗ್ರ ಶಿಕ್ಷಣ ಕರ್ನಾಟಕ

ಸಲಹೆ

ಶ್ರೀ ಎಂ.ಎನ್. ಬೇಗ್ ವಿಶ್ರಾಂತ ನಿರ್ದೇಶಕರು ಶಾಲಾ ಶಿಕ್ಷಣ ಇಲಾಖೆ ಬೆಂಗಳೂರು	**ಡಾ॥ ಹರಿಪ್ರಸಾದ್.ಜಿ.ವಿ** ಉಪನಿರ್ದೇಶಕರು ಲೋಕ ಶಿಕ್ಷಣ, ಡಿಎಸ್ಇಆರ್ಟಿ ಬೆಂಗಳೂರು	**ಶ್ರೀ ವಿಶ್ವನಾಥ ಕೆ.ವಿ.** ಜಿಲ್ಲಾ ಉಪಯೋಜನಾ ಸಮನ್ವಯಾಧಿಕಾರಿ ಬೆಂಗಳೂರು ದಕ್ಷಿಣ ಜಿಲ್ಲೆ

ಕಾರ್ಯಕ್ರಮ ಸಂಯೋಜನೆ ಮತ್ತು ಮಾರ್ಗದರ್ಶನ

ಡಾ॥ ಎಸ್. ಗುಣವತಿ
ಸಹಾಯಕ ಯೋಜನಾ ಸಮನ್ವಯಾಧಿಕಾರಿ
ಬೆಂಗಳೂರು ದಕ್ಷಿಣ ಜಿಲ್ಲೆ (ರಾಮನಗರ)

ಪಠ್ಯಪುಸ್ತಕ ರಚನೆಯ ಸಂಪನ್ಮೂಲ ಶಿಕ್ಷಕರ ವಿವರ

ಶ್ರೀ ಆರ್. ಡಿ. ರವೀಂದ್ರ
ಕನ್ನಡ ಭಾಷಾ ಶಿಕ್ಷಕರು, ಸ.ಪ್ರೌ.ಶಾಲೆ, ಲೋಕನಾಥಪುರ,
ಕೊಪ್ಪ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ

ಶ್ರೀ ಗೋಪಿನಾಥ್ ಬಿ.ಎಸ್., ಬಿ.ಆರ್.ಪಿ. ಬಿ.ಆರ್.ಸಿ, ಬಂಗಾರಪೇಟೆ, ಕೋಲಾರ ಜಿಲ್ಲೆ.	**ಶ್ರೀಮತಿ ವಿದ್ಯಾವತಿ ಬ್ಯಾಕೋಡಿ,** ಸಹಶಿಕ್ಷಕಿ, ಸ.ಹಿ.ಪ್ರಾ.ಶಾಲೆ ಯಡ್ರಾಂವಿ, ಸವದತ್ತಿ ತಾಲ್ಲೂಕು, ಬೆಳಗಾವಿ ಜಿಲ್ಲೆ.
ಶ್ರೀ ರಾಘವೇಂದ್ರ ವಸಂತ. ಬಡಿಗೇರ, ಸಹಶಿಕ್ಷಕರು, ಸ.ಹಿ.ಪ್ರಾ.ಶಾಲೆ ಎತ್ತಿನಗುಡ್ಡ, ಧಾರವಾಡ ಶಹರ, ಧಾರವಾಡ ಜಿಲ್ಲೆ.	**ಶ್ರೀಮತಿ ಸುಜಾತ ಗಣಪತಿ ರೇವಣಕರ,** ಸಹಶಿಕ್ಷಕಿ, ಸ.ಮಾ.ಹಿ.ಪ್ರಾ. ಶಾಲೆ ಕೇಣಿ, ಅಂಕೋಲಾ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ.
ಶ್ರೀ ಶಿವಕುಮಾರ ಎಸ್. ಚಿತ್ರಕಲಾ ಶಿಕ್ಷಕರು, ಕರ್ನಾಟಕ ಪಬ್ಲಿಕ್ ಶಾಲೆ, ಬೆಂಗಳೂರು ದಕ್ಷಿಣ ವಲಯ–02.	**ಶ್ರೀ ಶಾಂತಕುಮಾರ್ ಎಚ್. ಆರ್.** ಚಿತ್ರಕಲಾ ಶಿಕ್ಷಕರು, ಕೆ.ಪಿ.ಎಸ್., ಕೆ.ಆರ್. ಪುರಂ, ಬೆಂಗಳೂರು ದಕ್ಷಿಣ ವಲಯ–04.

NOT TO BE REPUBLISHED © KSTBS

ಮುನ್ನುಡಿ

ಆತ್ಮೀಯ ಶಿಕ್ಷಕ ಬಂಧುಗಳೆ ಹಾಗೂ ನೆಚ್ಚಿನ ಪೋಷಕರೆ. . . ,

FLN ಕಲಿಕಾ ತತ್ವಗಳ ಅಡಿಯಲ್ಲಿ ಆಯ್ದ ಕಲಿಕಾ ಫಲಗಳನ್ನು ಆದ್ಯತೆಯಲ್ಲಿ ಪರಿಗಣಿಸಿ, ಮಕ್ಕಳಿಗೆ ಚಟುವಟಿಕೆಗಳನ್ನು ರೂಪಿಸಿರುವ ಪ್ರಯತ್ನವೇ ಈ ನಲಿಕಲಿ ಅಭ್ಯಾಸ ಸಹಿತ ಪಠ್ಯಪುಸ್ತಕಗಳು.

'ಬುನಾದಿ ಸಾಕ್ಷರತೆ'ಯ ಅಡಿಯಲ್ಲಿ ಪ್ರಥಮ ಭಾಷೆಯ ಕಲಿಕಾ ತತ್ವಗಳ ಅರಿವಿನೊಂದಿಗೆ ಭಾಷಾ ಮೌಖಿಕ ಸಂವಹನ ಕೌಶಲ, ಸಂಕೇತಿಕರಣ, ನಿರರ್ಗಳ ಓದು, ಗ್ರಹಿಕೆಯುಕ್ತ ಓದು ಮತ್ತು ಬರವಣಿಗೆಯ ಮೂಲ ಕೌಶಲಗಳ ಬಳಕೆಯಲ್ಲಿ ಪ್ರತೀ ಮಗುವೂ ಸ್ವಂತಿಕೆಯನ್ನು ಕಟ್ಟಿಕೊಳ್ಳುವಂತೆ ಹಲವಾರು ಚಟುವಟಿಕೆಗಳನ್ನು ಪಠ್ಯಪುಸ್ತಕದಲ್ಲಿ ಅಳವಡಿಸಲಾಗಿದೆ.

'ಬುನಾದಿ ಸಂಖ್ಯಾ ಜ್ಞಾನ'ದ ಅಡಿಯಲ್ಲಿ ಅಂಕೆ–ಸಂಖ್ಯೆಗಳ ಪೂರ್ವ ಕಲಿಕಾ ತತ್ವಗಳ ಅರಿವು, ಸಂಖ್ಯೆಗಳ ಕಲ್ಪನೆ, ಆಕೃತಿಗಳು–ವಿನ್ಯಾಸಗಳು, ಅಳತೆಗಳು ಮತ್ತು ದತ್ತಾಂಶ ಸಂಗ್ರಹಣೆಯ ಬಳಕೆಯನ್ನು ಪರಿಸರದ ನೆಲೆಗಟ್ಟಿನಲ್ಲಿ ಅರ್ಥೈಸಿಕೊಳ್ಳಲು ನೆರವಾಗುವಂತೆ ಹಲವಾರು ಚಟುವಟಿಕೆಗಳನ್ನು ಪಠ್ಯಪುಸ್ತಕದಲ್ಲಿ ರೂಪಿಸಲಾಗಿದೆ.

3ನೇ ತರಗತಿಗೆ ಪರಿಸರ ಅಧ್ಯಯನ ಎಂಬ ವಿಷಯದ ಅಡಿಯಲ್ಲಿ ಅತ್ಯಗತ್ಯವಾಗಿ ರೂಢಿಸಬೇಕಿರುವ ಆರೋಗ್ಯಕರ ಅಭ್ಯಾಸಗಳನ್ನು, ಪರಿಸರದ ಮೂಲಭೂತ ತಿಳುವಳಿಕೆಯ ಜ್ಞಾನ ಮತ್ತು ಅನ್ವಯ ಆಧಾರಿತ ಚಟುವಟಿಕೆಗಳನ್ನು ನೀಡಲಾಗಿದ್ದು, ಒಳಾಂಗಣ ಮತ್ತು ಹೊರಾಂಗಣ ಸನ್ನಿವೇಶಗಳಲ್ಲಿ ಚರ್ಚಿಸಿ, ಮಾಹಿತಿ / ದತ್ತಾಂಶ ಸಂಗ್ರಹಿಸಿ, ಯೋಜಿಸಿ, 21ನೇ ಶತಮಾನದ ಕೌಶಲ್ಯಗಳ ಸಹಿತ ಅನುಭವಗಳನ್ನು ಕಟ್ಟಿಕೊಳ್ಳಲು ನೆರವಾಗುವಂತೆ ಚಟುವಟಿಕೆಗಳನ್ನು ರೂಪಿಸಲಾಗಿದೆ.

ಎನ್.ಸಿ.ಇ.ಆರ್.ಟಿ., ಎ.ಪಿ.ಎಫ್., ಪ್ರಥಮ್, ಅಕ್ಷರ, ಧ್ವನಿ ಮತ್ತು ಇತರೆ ಸಂಸ್ಥೆಗಳ ಅಗತ್ಯ ಸಂಪನ್ಮೂಲಗಳನ್ನು ಮಕ್ಕಳ ಕಲಿಕಾ ಹಿತದೃಷ್ಟಿಯಿಂದ ಕೆಲವು ಚಟುವಟಿಕೆಗಳಲ್ಲಿ ಅಳವಡಿಸಿಕೊಂಡಿದ್ದು, ಇದೇ ಸಂದರ್ಭದಲ್ಲಿ ಅವುಗಳ ನೆರವು ಮತ್ತು ಕೃಪೆಯನ್ನು ಸಹ ಸ್ಮರಿಸಿದೆ. FLN ಆಧಾರಿತ ಪಠ್ಯವಸ್ತುವಿನ ಪ್ರಮುಖ ಆಶಯಗಳಿಗೆ ಪೂರಕವಾಗಿ ಪಠ್ಯಪುಸ್ತಕಗಳ ವಿನ್ಯಾಸಕ್ಕೆ ಅಗತ್ಯ ಕ್ರಮವಹಿಸಲಾಗಿದೆ. ಇದಕ್ಕೆ ಅನುಗುಣವಾಗಿ ತರಗತಿ ಕಲಿಕಾ ಪ್ರಕ್ರಿಯೆಯನ್ನು ನಿರ್ವಹಿಸಲು ಹಾಗೂ ಮೌಲ್ಯಾಂಕನ ಚಟುವಟಿಕೆಗಳನ್ನು ಆಯೋಜಿಸಲು ಕಾರ್ಯೋನ್ಮುಖರಾಗುವಂತೆ ಶಿಕ್ಷಕರಿಗೆ ಈ ಮೂಲಕ ಸೂಚಿಸಲಾಗಿದೆ. ಇಲ್ಲಿನ ಚಟುವಟಿಕೆಗಳನ್ನು ಮಾದರಿಯಾಗಿ ನೀಡಲಾಗಿದ್ದು, ಮಕ್ಕಳಿಗೆ ಯಾವುದೇ ರೀತಿಯ ಒತ್ತಡವಾಗದಂತೆ ಶಿಕ್ಷಕರು ಕ್ರಿಯಾಶೀಲ ಚಟುವಟಿಕೆಗಳನ್ನು ರೂಪಿಸಿಕೊಳ್ಳಲು ಮುಕ್ತ ಅವಕಾಶವನ್ನು ಕಲ್ಪಿಸಿದೆ.

ಎಂದಿನಂತೆ ಎಲ್ಲಾ ಹಂತದ ಸಹವರ್ತಿಗಳ ಹಿಮ್ಮಾಹಿತಿ ಮತ್ತು ಸಲಹೆಗಳನ್ನು ಸ್ವಾಗತಿಸಿದೆ. ಪುಸ್ತಕಗಳ ರಚನೆಗೆ ಶ್ರಮಿಸಿದ ಸಂಪನ್ಮೂಲ ತಜ್ಞರು ಮತ್ತು ಶಿಕ್ಷಕರ ಸಮೂಹವನ್ನು ಅಭಿನಂದಿಸುತ್ತಾ, ವಿವಿಧ ಹಂತದ ಅಧಿಕಾರಿಗಳು, ಕ್ಷೇತ್ರ ಹಂತದ ಎಲ್ಲಾ ಸಂಪನ್ಮೂಲ ವ್ಯಕ್ತಿಗಳು ಶಾಲಾ ಭೇಟಿಯನ್ನು ನಿಯಮಿತವಾಗಿ ಕೈಗೊಳ್ಳುವ ಮೂಲಕ ಸಮರ್ಪಕ ಅನುಷ್ಠಾನ ಮತ್ತು ಅನುಪಾಲನೆಗೆ ಮುಂದಾಗುವಂತೆ ನಿರ್ದೇಶಿಸಿದೆ.

ರಾಜ್ಯ ಯೋಜನಾ ನಿರ್ದೇಶಕರು
ಸಮಗ್ರ ಶಿಕ್ಷಣ ಕರ್ನಾಟಕ

NOT TO BE REPUBLISHED @KSCERT

ನನ್ನ ಕಲಿಕೆಯ ವಿಷಯಗಳು


✵ ಬಿಂಬ – ಸೇತುಬಂಧ
1 - 25





1. ನನ್ನ ಕುಟುಂಬ ಹೇಗೆ ಭಿನ್ನ?
26 - 44

2. ಹಸಿರೇ ಉಸಿರು...!
45 - 57





3. ನಿಮ್ಮ ಹಾಗೆಯೇ ನಾವು...!
58 - 70

4. ಮೋಜಿನ ಸುತ್ತಾಟ & ಕಲಿಕಾ ಫಲಗಳು
71 - 88, ಶೀರ್ಷಿಕೆ ಪುಟ



@KTBS NOT TO BE REPUBLISHED

ಸೇತುಬಂಧ ಚಟುವಟಿಕೆಗಳು

1. ಚಿತ್ರವನ್ನು ಗಮನಿಸಿ ಕೊಟ್ಟಿರುವ ಪ್ರಶ್ನೆ / ಹೇಳಿಕೆಗಳಿಗೆ ಉತ್ತರಿಸು.



ಚಿತ್ರದ ಹೆಸರು:

ಇದನ್ನು ತಯಾರಿಸಲು ಯಾವ ಸಾಮಗ್ರಿಯನ್ನು ಬಳಸಲಾಗಿದೆ?

_____

ಇದೇ ಸಾಮಗ್ರಿ ಬಳಸಿ ತಯಾರಿಸುವ ಬೇರೆ ಯಾವುದಾದರೂ 2 ವಸ್ತುಗಳ ಹೆಸರು ಬರೆ.

1. _____

2. _____

© KTBS NOT TO BE REPUBLISHED

2. ಕರವಸ್ತ್ರ ಉಪಯೋಗಿಸುವ ಸನ್ನಿವೇಶಗಳನ್ನು ಗಮನಿಸು. ಸರಿ–ತಪ್ಪು ಗುರುತಿಸಿ ಬರೆ.



ನೀನು, ಸ್ನೇಹಿತನೊಂದಿಗೆ ಆಟ ಆಡುವಾಗ ಅವನಿ/ಳಿಗೆ ಸೀನು ಬರುತ್ತದೆ.	
ಅಕ್ಕ ಸೈಕಲ್ ಒರೆಸುವಾಗ ಕರವಸ್ತ್ರ ಬಳಸುತ್ತಾಳೆ.	
ನಿನ್ನ ಸ್ನೇಹಿತ/ತೆ ಶೀತದಿಂದ ಬಳಲುತ್ತಿದ್ದಾನೆ/ಳೆ.	
ಕಪ್ಪುಹಲಗೆ ಒರೆಸುವಾಗ ಕರವಸ್ತ್ರ ಬಳಸುತ್ತಾನೆ/ಳೆ.	
ನೀನು, ನಿನ್ನ ಸ್ನೇಹಿತನೊಂದಿಗೆ ಕಥೆ ಪುಸ್ತಕ ಓದುತ್ತಿರುವಾಗ ಕೆಮ್ಮು ಬರುತ್ತದೆ.	

ಸೇತುಬಂಧ ಚಟುವಟಿಕೆಗಳು

3. ಉದಯಿಸುತ್ತಿರುವ ಸೂರ್ಯನ ಚಿತ್ರ ಬಿಡಿಸಿ, ಬಣ್ಣ ತುಂಬು. ತರಗತಿಯಲ್ಲಿ ಪ್ರದರ್ಶಿಸು.

@KTBS
NOT TO BE REPUBLISHED

ಸೇತುಬಂಧ ಚಟುವಟಿಕೆಗಳು

4. ಹಲೋ ಜಾಣರೆ, ನಮ್ಮ ಹೆಜ್ಜೆ ಗುರುತುಗಳನ್ನು ತಿಳಿದು, ಗೆರೆ ಎಳೆದು ಹೊಂದಿಸಿ.






















@KTBS NOT TO BE REPUBLISHED

ಸೇತುಬಂಧ ಚಟುವಟಿಕೆಗಳು

5. ಈ ಚಿತ್ರಗಳನ್ನು ಗಮನಿಸು. ಇಂತಹ ಸನ್ನಿವೇಶಗಳಲ್ಲಿ ನೀನು ಹೇಗೆ ಸಹಾಯ ಮಾಡುವೆ? ಸರಿಯಾದ ಆಯ್ಕೆಗಳ ಮುಂದೆ ಇರುವ ವೃತ್ತದಲ್ಲಿ ✔ ಹಾಕು.

ಸನ್ನಿವೇಶ–1: ಬಸ್ಸಿನಲ್ಲಿ ವೃದ್ಧರು ನಿಂತಿರುವಾಗ

* ಯುವಕರಿಗೆ ಸೀಟು ಬಿಟ್ಟುಕೊಡಲು ಹೇಳುವೆ. ○
* ನೋಡಿಕೊಂಡು ಸುಮ್ಮನೆ ಕುಳಿತುಕೊಳ್ಳುವೆ. ○
* ನಾನೇ ನನ್ನ ಸೀಟನ್ನು ಬಿಟ್ಟುಕೊಡುವೆ. ○




ಸನ್ನಿವೇಶ–2: ಬ್ಯಾಂಕ್‌ಕೌಂಟರ್‌ನ ಸಾಲಿನಲ್ಲಿಮಗುವನ್ನುಎತ್ತಿಕೊಂಡು ನಿಂತ ಮಹಿಳೆ ಕಂಡಾಗ

* ನೋಡಿಕೊಂಡು ಸುಮ್ಮನೆ ನಿಲ್ಲುವೆ.
* ಕುಳಿತುಕೊಳ್ಳಲು ನನ್ನ ಸೀಟು ಬಿಟ್ಟುಕೊಡುವೆ. ○
* ಸರತಿಯಲ್ಲಿ ಮೊದಲು ಅವಕಾಶ ಮಾಡಿಕೊಡುವೆ. ○ ○



ಸನ್ನಿವೇಶ–3: ಅಪಾಯ–ಅಪಘಾತದ ಸನ್ನಿವೇಶಗಳನ್ನು ಕಂಡಾಗ

* 112 ಸಹಾಯವಾಣಿಗೆ ಕರೆ ಮಾಡಿ ತಿಳಿಸುವೆ.
* ಮೊಬೈಲ್‌ನಲ್ಲಿ ವಿಡಿಯೋ ಮಾಡಿಕೊಳ್ಳುವೆ. ○
* ಚಪ್ಪಾಳೆ ತಟ್ಟುತ್ತಾ ನಿಲ್ಲುವೆ. ○ ○



ಸನ್ನಿವೇಶ–4: ವಿಶೇಷ ಚೇತನವುಳ್ಳ ವ್ಯಕ್ತಿಯೊಬ್ಬರು ರಸ್ತೆ ದಾಟುತ್ತಿರುವಾಗ

* ನನ್ನಷ್ಟಕ್ಕೆ ನಾನು ಸುಮ್ಮನೆ ಹೋಗುವೆ.
* ಅವರನ್ನು ನೋಡಿ ಅಣಕು ಮಾಡುವೆ. ○
* ರಸ್ತೆ ದಾಟಿಸಲು ಸಹಾಯ ಮಾಡುವೆ. ○ ○



@KTBS NOT TO BE REPUBLISHED

ಸೇತುಬಂಧ ಚಟುವಟಿಕೆಗಳು

6. ಚಿತ್ರಗಳನ್ನು ಗಮನಿಸು. ನಮಗೆ ಸಹಾಯವಾಗುವ ಸಂದರ್ಭಗಳಿಗೆ ತಕ್ಕಂತೆ ಗೆರೆ ಎಳೆದು ಹೊಂದಿಸು.

"ಅ' ಪಟ್ಟಿ	"ಬ" ಪಟ್ಟಿ
	ಬೆಂಕಿ ಅಪಘಾತ ಹಾಗೂ ತುರ್ತು ಸೇವೆಗಳಿಗಾಗಿ
	ಸಹಾಯದ ಅಗತ್ಯವಿದ್ದ ಮಕ್ಕಳಿಗೆ ತುರ್ತು ಸೇವೆಗಾಗಿ
	ದುಡಿಯುತ್ತಿರುವ ಮಕ್ಕಳನ್ನು ಶಾಲೆಗೆ ಕರೆತರುವುದು
	ಎಲ್ಲ ರೀತಿಯ ತುರ್ತು ಸಂದರ್ಭಗಳಲ್ಲಿ ಸಹಾಯಕ್ಕಾಗಿ
	ಗಾಯಾಳು ಅಥವಾ ರೋಗಿಯನ್ನು ಆಸ್ಪತ್ರೆಗೆ ಸಾಗಿಸಲು

© KTBS NOT TO BE REPUBLISHED

ಸೇತುಬಂಧ ಚಟುವಟಿಕೆಗಳು

7. ಸಸ್ಯ ಬೆಳವಣಿಗೆಯ ಹಂತಗಳಿಗೆ ತಕ್ಕಂತೆ ಅನುಕ್ರಮ ಸಂಖ್ಯೆಗಳನ್ನು ಖಾಲಿ ಚೌಕದಲ್ಲಿ ಬರೆ


ಚಿಗುರು ಎಲೆಗಳು ಮೂಡುವುದು.	
ಮೊಳಕೆಯೊಡೆಯುವುದು.	
ಹೂವು ಕಾಣಿಸಿಕೊಳ್ಳುವುದು.	
ಬೀಜವನ್ನು ಹಾಕುವುದು.	
ಕಾಯಿ, ಹಣ್ಣುಗಳು ಕಾಣಿಸಿಕೊಳ್ಳುವುದು.	

8. ಬೀಜದಿಂದ ಮೊಳಕೆಯೊಡೆತ್ತಿರುವಂತೆ ಸಸಿಯೊಂದರ ಚಿತ್ರವನ್ನು ಇಲ್ಲಿ ರಚಿಸು.

@KTBS NOT TO BE REPUBLISHED

ಸೇತುಬಂಧ ಚಟುವಟಿಕೆಗಳು


9. ಚಿಂಟುವಿಗೆ ಹಸಿವಾಗಿದೆ. ಅನ್ನ ಮಾಡಲು ಬೇಕಾಗುವ ಸಾಮಗ್ರಿಗಳ ಕೆಳಗೆ ✔ ಗುರುತು ಹಾಕಿ ಅವನಿಗೆ ಸಹಾಯ ಮಾಡುವೆಯಾ?

 ☐	 ☐
 ☐	 ☐
 ☐	 ☐
 ☐	 ☐

© @KTBS NOT TO BE REPUBLISHED

ಸೇತುಬಂಧ ಚಟುವಟಿಕೆಗಳು

10. ಇಂತಹ ಸಂಬಂಧದ ಸದಸ್ಯರು ನಿಮ್ಮ ಮನೆಯಲ್ಲಿ ಇದ್ದರೆ ಕೊಟ್ಟಿರುವ ಚೌಕದ ಕೆಳಗೆ √ ಗುರುತು ಹಾಕಿರಿ.ಸದಸ್ಯರ ಹೆಸರನ್ನು ನಿಮ್ಮ ನೋಟ್ ಪುಸ್ತಕದಲ್ಲಿ ಬರೆಯಿರಿ.



NOT TO BE REPUBLISHED © KTBS

11. ನಿಮ್ಮ ಮನೆಯಲ್ಲಿ ಆಚರಿಸುವ ಯಾವುದಾದರೂ 04 ಹಬ್ಬಗಳ ಹೆಸರನ್ನು ಇಲ್ಲಿ ಬರೆಯಿರಿ

_____ _____

_____ _____

ಸೇತುಬಂಧ ಚಟುವಟಿಕೆಗಳು


12. ಈ ಚಿತ್ರವನ್ನು ಗಮನಿಸು. 3–4 ವಾಕ್ಯಗಳಲ್ಲಿ ನಿನ್ನ ಅನಿಸಿಕೆಯನ್ನು ಬರೆ.



© KSEEB NOT TO BE REPUBLISHED

ಸೇತುಬಂಧ ಚಟುವಟಿಕೆಗಳು

13. ಕೊಟ್ಟಿರುವ ಸಸ್ಯದ ಭಾಗಗಳನ್ನು ಗುರುತಿಸು.



14. ಇಲ್ಲಿ ಕೊಟ್ಟಿರುವಂತೆ ನಿನ್ನ ಮನೆಯ ಅಂಚೆ ವಿಳಾಸವನ್ನು ಬರೆ.

ನಿನ್ನ ಪೂರ್ಣ ಹೆಸರು	
ಮನೆಯ ಹೆಸರು/ ಮನೆ ನಂಬರ್:	
ಓಣಿ/ಬೀದಿ/ಕ್ರಾಸ್/ರಸ್ತೆಯ ಹೆಸರು:	
ನಿನ್ನ ಊರಿನ ಹೆಸರು:	
ತಾಲೂಕಿನ ಹೆಸರು:	
ಜಿಲ್ಲೆಯ ಹೆಸರು:	
ಪೋಸ್ಟ್ (ಅಂಚೆ ಕಛೇರಿ):	
ಪಿನ್ ಕೋಡ್:	

NOT TO BE REPUBLISHED

ಸೇತುಬಂಧ ಚಟುವಟಿಕೆಗಳು

15. ಈ ಚಿತ್ರವನ್ನು ಗಮನಿಸಿ ಉತ್ತರಿಸು.



ಈ ಚಿತ್ರದಲ್ಲಿ ಮಕ್ಕಳು ಯಾವ ಯಾವ ಆಟಗಳನ್ನು ಆಡುತ್ತಿದ್ದಾರೆ? ಹೆಸರಿಸಿ.

ನೀನು ಯಾವ ಆಟಗಳನ್ನು ಆಡಿರುವೆ/ಆಡಲು ಬಯಸುವೆ? ಅವುಗಳನ್ನು ಹೆಸರಿಸು.

© NCERT not to be republished

ಸೇತುಬಂಧ ಚಟುವಟಿಕೆಗಳು

16. ಕೈ ತೊಳೆಯುವ ಹಂತಗಳನ್ನು ಅವುಗಳ ಹೇಳಿಕೆಗಳೊಂದಿಗೆ ನೀಡಿದೆ. ವೃತ್ತದಲ್ಲಿ ಚಿತ್ರದ ಸಂಖ್ಯೆ ಬರೆಯುವ ಮೂಲಕ ಹೊಂದಿಸು.




ಬೆರಳುಗಳ ಸಂಧಿಗಳಲ್ಲಿ ಉಜ್ಜಿ ತೊಳೆಯುವುದು. ( )



ಕೈಗಳಲ್ಲಿ ಸೋಪಿಲ್ಲದಂತೆ ಸ್ವಚ್ಛವಾಗಿ ತೊಳೆಯುವುದು. ( )



ಕೈಗಳಿಗೆ ಸೋಪನ್ನು ಹಚ್ಚಿ ಚೆನ್ನಾಗಿ ಉಜ್ಜುವುದು. ( )




ಮೊದಲು ಕೈಗಳನ್ನು ಒದ್ದೆ ಮಾಡಿಕೊಳ್ಳುವುದು. ( )

@KTBS NOT TO BE REPUBLISHED

ಸೇತುಬಂಧ ಚಟುವಟಿಕೆಗಳು

17. ಕೆಲವು ಪ್ರಾಣಿಗಳ ಚಿತ್ರಗಳನ್ನು ಕೊಟ್ಟಿದೆ. ಅವು ಸಾಕು ಪ್ರಾಣಿಗಳಾಗಿದ್ದಲ್ಲಿ ಊರಿನ ಚಿತ್ರಕ್ಕೆ ಹಾಗೂ ಕಾಡು ಪ್ರಾಣಿಗಳಾಗಿದ್ದಲ್ಲಿ ಕಾಡಿನ ಚಿತ್ರಕ್ಕೆ ಗೆರೆ ಎಳೆದು ಹೊಂದಿಸು. ಎರಡೂ ಆಗಿದ್ದಲ್ಲಿ ಪ್ರಾಣಿಗಳ ಚಿತ್ರದ ಕೆಳಗೆ ಅದರ ಹೆಸರು ಬರೆ.




© KTBS NOT TO BE REPUBLISHED

ಸೇತುಬಂಧ ಚಟುವಟಿಕೆಗಳು

18. ಕಸದ ಚಿತ್ರಗಳನ್ನು ಗಮನಿಸು. ಕೊಟ್ಟಿರುವ ಖಾಲಿ ಜಾಗದಲ್ಲಿ ಅವು ಯಾವ ರೀತಿಯ ಕಸ ಎಂದು ಬರೆ.



@KTBS NOT TO BE REPUBLISHED

ಸೇತುಬಂಧ ಚಟುವಟಿಕೆಗಳು

19. ಇಲ್ಲಿನ ಚಿತ್ರಗಳಲ್ಲಿ ಸರಿಯಾದ ಅಭ್ಯಾಸಗಳ ಕೆಳಗೆ √ ಗುರುತು, ತಪ್ಪಾದ ಅಭ್ಯಾಸಗಳ ಕೆಳಗೆ × ಗುರುತು ಹಾಕಿ













@KTBS NOT TO BE REPUBLISHED

ಸೇತುಬಂಧ ಚಟುವಟಿಕೆಗಳು

20. ನಿಂಬೆ ಹಣ್ಣಿನ ಪಾನೀಯ ತಯಾರಿಸುವ ವಿಧಾನಗಳನ್ನು ಅದಲು ಬದಲು ಮಾಡಿಕೊಟ್ಟಿದೆ. ಅನುಕ್ರಮವಾಗಿ ಬರೆ.

ಪಾನೀಯ ತಯಾರಿಸುವ ಹಂತಗಳು :

1. ನಾಲ್ಕು ಚಮಚ ಸಕ್ಕರೆ ಹಾಕಿ ನೀರಿನಲ್ಲಿ ಸಕ್ಕರೆ ಕರಗುವ ಹಾಗೆ ಕಲಕುವುದು.
2. ಒಂದು ಪಾತ್ರೆಯಲ್ಲಿ ಎರಡು ಲೋಟ ನೀರು ತೆಗೆದುಕೊಳ್ಳುವುದು.
3. ಲಿಂಬೆ ಹಣ್ಣನ್ನು ಎರಡು ಸಮಭಾಗಗಳಾಗಿ ಕತ್ತರಿಸಿ ಅದರ ರಸವನ್ನು ನೀರಿನಲ್ಲಿ ಹಿಂಡುವುದು.
4. ಮೊದಲು, ಲಿಂಬೆ ಹಣ್ಣಿನ ಜೂಸ್ ಮಾಡಲು ಒಂದು ನಿಂಬೆ ಹಣ್ಣು, ನಾಲ್ಕು ಚಮಚ ಸಕ್ಕರೆ, ಎರಡುಲೋಟ ನೀರು, ಒಂದು ಚಿಟಿಕೆ ಉಪ್ಪು, ಸ್ವಲ್ಪ ಏಲಕ್ಕಿ ಪುಡಿ ಇವುಗಳು ಸಿದ್ಧಪಡಿಸಿಕೊಳ್ಳುವುದು.
5. ಕೊನೆಯಲ್ಲಿ, ಸ್ವಲ್ಪ ಏಲಕ್ಕಿ ಪುಡಿ ಸೇರಿಸಿ, ನಿಂಬೆ ಹಣ್ಣಿನ ಪಾನೀಯವನ್ನು ಸ್ನೇಹಿತರೊಂದಿಗೆ ಕುಡಿ.
6. ಚಿಟಿಕೆ ಉಪ್ಪು ಸೇರಿಸಿ ಕಲಕುವುದು.

1.
2.
3.
4.
5.
6.

@KTBS NOT TO BE REPUBLISHED

ಸೇತುಬಂಧ ಚಟುವಟಿಕೆಗಳು

21. ಈ ಹೇಳಿಕೆಗಳನ್ನು ಓದು. ಸರಿಯಿದ್ದರೆ ಸೂಕ್ತ ಸ್ಥಳದಲ್ಲಿ ✓ ಗುರುತು ಹಾಗೂ ತಪ್ಪಿದ್ದರೆ ✗ ಗುರುತು ಹಾಕು.




- ಪ್ಲಾಸ್ಟಿಕ್ ಚೀಲಗಳನ್ನು ಎಲ್ಲೆಂದರಲ್ಲಿ ಬಿಸಾಡುವೆ.
- ಪ್ಲಾಸ್ಟಿಕ್ ವಸ್ತುಗಳನ್ನು ಮರುಬಳಕೆ ಮಾಡುವೆ.
- ಬಟ್ಟೆ ಅಥವಾ ಸೆಣಬಿನ ಚೀಲಗಳನ್ನು ಹೆಚ್ಚಾಗಿ ಬಳಕೆ ಮಾಡುವೆ.
- ಮಾರುಕಟ್ಟೆಗೆ ಬಟ್ಟೆ ಚೀಲಗಳನ್ನು ತೆಗೆದುಕೊಂಡು ಹೋಗುವೆ.
- ಪ್ಲಾಸ್ಟಿಕ್ ಬಳಕೆಯನ್ನು ಸಾಧ್ಯವಾದಷ್ಟು ಕಡಿಮೆ ಮಾಡುವೆ
- ಪ್ರಾಣಿಗಳು ಸೇವಿಸುವ ಆಹಾರದಲ್ಲಿ ಪ್ಲಾಸ್ಟಿಕ್ ವಸ್ತುಗಳು ಸೇರದಂತೆ ನೋಡಿಕೊಳ್ಳುವೆ.

22. ಕೊಟ್ಟ ಸಂದರ್ಭಗಳಿಗೆ ನಿನ್ನ ಪ್ರತಿಕ್ರಿಯೆಯನ್ನು ಆಯ್ದು ಬರೆ.
(ಆಶ್ಚರ್ಯ, ಕೋಪ, ದುಃಖ, ಸಂತೋಷ, ನಗು, ಹಾಸ್ಯ, ಭಯ)

- ನಾನು ಯಾವುದೇ ಸ್ಪರ್ಧೆಯಲ್ಲಿ ಭಾಗವಹಿಸಿದಾಗ _____
- ನನ್ನ ಹುಟ್ಟು ಹಬ್ಬವನ್ನು ಮನೆಯವರು ಮರೆತಾಗ _____
- ನನ್ನ ಮಾತಿನ ಶೈಲಿಯನ್ನು ನನ್ನ ಗೆಳೆಯ/ಗೆಳತಿ ಅನುಕರಣೆ ಮಾಡಿದಾಗ _____
- ನನ್ನ ಆಟಿಕೆಯನ್ನು ಯಾರಾದರೂ ಕಸಿದುಕೊಂಡಾಗ _____
- ನನ್ನ ಸ್ನೇಹಿತರೊಂದಿಗೆ ಆಟವಾಡುವಾಗ _____
- ನಾನು ರಸ್ತೆದಾಟಲು ಅಂಧರಿಗೆ ಸಹಾಯ ಮಾಡಿದಾಗ _____
- ನನ್ನನ್ನು ನೋಡಿ ನಾಯಿ ಬೊಗಳುತ್ತಾ ಓಡಿ ಬಂದಾಗ _____
- ಸಾಕು ಪ್ರಾಣಿಗಳಿಗೆ ನಾನೇ ಸ್ನಾನ ಮಾಡಿಸುವಾಗ _____

NOT TO BE REPUBLISHED © KTBS

23. ಶೌಚಾಲಯ ಬಳಸುವಾಗ ಅನುಸರಿಸಬೇಕಾದ ಕ್ರಮಗಳನ್ನು ನೀಡಿದೆ. ಪ್ರತಿದಿನ ನೀನು ಅನುಸರಿಸುವ ಹಂತಗಳನ್ನು ಅನುಕ್ರಮವಾಗಿ ಬರೆ.

- ಶೌಚಾಲಯ ಬಳಸಿದ ನಂತರ ನೀರು ಹಾಕುವೆ.
- ಶೌಚಾಲಯವನ್ನು ಬಳಸುವೆ.
- ಸೋಪು/ಹ್ಯಾಂಡ್ ವಾಶ್ ಬಳಸಿ ಸ್ವಚ್ಛವಾಗಿ ಕೈ ತೊಳೆಯುವೆ.
- ಶೌಚಾಲಯ ಬಳಸುವ ಮೊದಲು ನೀರು ಹಾಕುವೆ.

ಶೌಚಾಲಯ ಬಳಸುವ ಹಂತಗಳನ್ನು ಅನುಕ್ರಮವಾಗಿ ಬರೆದಾಗ .....

1.
2.
3.
4.

©KTBS NOT TO BE REPUBLISHED

24. ಚಿತ್ರ ನೋಡಿ, ಕೆಳಗಿನ ಪ್ರಶ್ನೆಗೆ ಉತ್ತರಿಸು.



1. ಈ ಚಿತ್ರದಲ್ಲಿ ನಿನಗೆ ಏನು ಕಾಣುತ್ತಿದೆ?

_____

_____

_____


2. ಇಂತಹ ಸಂದರ್ಭಗಳಲ್ಲಿ ನೀನು ಏನು ಮಾಡುವೆ?

_____


_____

_____

25. ಇಲ್ಲಿ ಕೆಲವು ಹೇಳಿಕೆಗಳನ್ನು ನೀಡಿದೆ. ಅವುಗಳನ್ನು ಓದಿ ಸರಿಯಾದ ಚಿತ್ರಗಳಿಗೆ ಗೆರೆ ಎಳೆದು ಹೊಂದಿಸು.











ರಸ್ತೆ ನಿಯಮ ಅನುಸರಿಸಿ ನಡೆಯುತ್ತೇವೆ

ಹಿರಿಯರ ನೆರವಿನಲ್ಲಿ ನೀರಿಗೆ ಇಳಿದು ಈಜುತ್ತೇನೆ.



ಮಾಳಿಗೆಯ ಸಲಾಕೆಗಳನ್ನು ಹತ್ತಿ ಕೆಳಗೆ ಬಗ್ಗಿ ನೋಡುವುದಿಲ್ಲ.

ಯಾವುದೇವಿದ್ಯುತ್ ಸ್ವಿಚ್ ಬೋರ್ಡ್‌ಗಳನ್ನು ಮುಟ್ಟುವುದಿಲ್ಲ.

ಚಾಕು ಬಳಸುವುದನ್ನು ಕಲಿತ ನಂತರ ಸರಿಯಾಗಿ ಉಪಯೋಗಿಸುತ್ತೇನೆ.

@KTBS NOT TO BE REPUBLISHED

26. ಈ ವಸ್ತುಗಳನ್ನು ಏತಕ್ಕಾಗಿ ಬಳಸುವೆ? ಸರಳವಾಗಿ ಬರೆ.

@KTBS NOT TO BE REPUBLISHED

27. ಒಗಟು ಬಿಡಿಸಿ ಜಾಣರೇ...!

ಗಿಡ ಕೊಡಲಾರದು, ಮರ ಬೆಳೆಸಲಾರದು, ಅದಿಲ್ಲದೇ ಊಟ ಸೇರಲಾರದು. ನಾನ್ಯಾರು?	ಎಲೆ ಇಲ್ಲ, ಸುಣ್ಣ ಇಲ್ಲ, ಬಣ್ಣ ಇಲ್ಲ, ತುಟಿ ಕೆಂಪಗಾಗಿದೆ. ಮಳೆ ಇಲ್ಲ, ಬೆಳೆ ಇಲ್ಲ, ಮೈ ಹಸಿರಾಗಿದೆ. ನಾನ್ಯಾರು?
ಉತ್ತರ:	ಉತ್ತರ: ಪಿಳ್ಳಂಗೋವಿ

28. ಈ ಚಿತ್ರವನ್ನು ಗಮನಿಸು. ಇಲ್ಲಿ ಕಾಣುವ ಪ್ರಾಣಿಗಳ ಹೆಸರುಗಳನ್ನು ಪಟ್ಟಿ ಮಾಡು.






ನೆಲದ ಮೇಲೆ ವಾಸಿಸುವ ಪ್ರಾಣಿಗಳು	ನೀರಿನಲ್ಲಿ ವಾಸಿಸುವ ಪ್ರಾಣಿಗಳು	ನೆಲ ಮತ್ತು ನೀರು ಎರಡರಲ್ಲೂ ವಾಸಿಸುವ ಪ್ರಾಣಿಗಳು

NOT TO BE REPUBLISHED © KTBS

ಸೇತುಬಂಧ ಚಟುವಟಿಕೆಗಳು


29. ಸಹ ಸಂಬಂಧ ಇರುವ ಚಿತ್ರಗಳನ್ನು ಗಮನಿಸು. ಸೂಕ್ತ ಆಯ್ಕೆಯ ಚಿತ್ರಕ್ಕೆ ಗುರುತು ಹಾಕು. ನಿನ್ನ ಆಯ್ಕೆಗೆ ಕಾರಣ ಬರೆ.

ಚಿತ್ರಗಳು	ಆಯ್ಕೆಗೆ ಕಾರಣಗಳು
	
	
	

©KTBS NOT TO BE REPUBLISHED

ಸೇತುಬಂಧ ಚಟುವಟಿಕೆಗಳು

30. ಈ ಚಿತ್ರಗಳನ್ನು ಗಮನಿಸು. ನೀನು ಮಾಡುವ ಕೆಲಸಗಳ ಮುಂದೆ √ ಗುರುತು ಹಾಕು. ಇವುಗಳಲ್ಲಿ ನೀನು ಹೆಚ್ಚು ಇಷ್ಟ ಪಡುವ ಕೆಲಸದ ಬಗ್ಗೆ 2–3 ವಾಕ್ಯಗಳಲ್ಲಿ ಬರೆ.



_____

_____

_____

_____

@KTBS NOT TO BE REPUBLISHED

31. ಈ ಚಿತ್ರ ಸಂಕೇತಗಳನ್ನು ಸೂಕ್ತಪದಗಳಿಗೆ ಹೊಂದಿಸು.



ಶೌಚಾಲಯ

ಆಸ್ಪತ್ರೆ

ಕಸದ ತೊಟ್ಟಿ

ಸೇತುಬಂಧ ಚಟುವಟಿಕೆಗಳು


32. ಈ ಚಿತ್ರಗಳಲ್ಲಿರುವ ವ್ಯಕ್ತಿಗಳನ್ನು ಗಮನಿಸಿ, ಪ್ರಶ್ನೆಗಳಿಗೆ ಉತ್ತರಿಸು.


	ಇವರು ಯಾರು? _____ ಇವರು ಎಲ್ಲಿ ಕೆಲಸ ಮಾಡುತ್ತಾರೆ? _____ ಇವರಿಂದ ನಮಗೆ ಆಗುವ ಸಹಾಯವೇನು? _____
	ಇವರು ಯಾರು? _____ ಇವರು ಎಲ್ಲಿ ಕೆಲಸ ಮಾಡುತ್ತಾರೆ? _____ ಇವರಿಂದ ನಮಗೆ ಆಗುವ ಸಹಾಯವೇನು? _____
	ಇವರು ಯಾರು? _____ ಇವರು ಎಲ್ಲಿ ಕೆಲಸ ಮಾಡುತ್ತಾರೆ? _____ ಇವರಿಂದ ನಮಗೆ ಆಗುವ ಸಹಾಯವೇನು? _____


@KTBS NOT TO BE REPUBLISHED


ಸೇತುಬಂಧ ಚಟುವಟಿಕೆಗಳು

33. ಈ ಚಿತ್ರಗಳನ್ನು ಗುರುತಿಸು. ಚೌಕದಲ್ಲಿ ಇವುಗಳ ಹೆಸರನ್ನು ಬರೆ.






















© KTBS NOT TO BE REPUBLISHED

1 ನನ್ನ ಕುಟುಂಬ ಹೇಗೆ ಭಿನ್ನ?

ಶಿಕ್ಷಕರು, ಮಕ್ಕಳಿಗೆ ತಮ್ಮ ತಮ್ಮ ಕುಟುಂಬ ನಕ್ಷೆಯನ್ನು ತಯಾರಿಸಿಕೊಂಡು ಬರಲು ತಿಳಿಸಿದ್ದರು. ಅದಕ್ಕಾಗಿ ತಾತನ ಸಹಾಯದಿಂದ ಮೀನಾ ತನ್ನ ಕುಟುಂಬ ನಕ್ಷೆ ತಯಾರಿಸಿದ್ದಾಳೆ.

ಮೀನಾಳ ಕುಟುಂಬ ನಕ್ಷೆ (Family Tree)



@KTBS TO BE PUBLISHED

ಕುಟುಂಬ: ಸಂಬಂಧಗಳಿಂದ ಅಥವಾ ಹುಟ್ಟಿನಿಂದ ಸಂಪರ್ಕ ಹೊಂದಿರುವ ಜನರ ಗುಂಪು.

* ಯೋಚಿಸಿ, ಉತ್ತರಿಸೋಣ.


ಇವರ ನಡುವಿನ ಸಂಬಂಧಗಳನ್ನು ಬರೆ.

1. ಮೀನಾಳಿಗೆ ಸೋಮಣ್ಣ ಏನಾಗಬೇಕು?	5. ಶಾರದಾ ಮತ್ತು ಸುಶೀಲಮ್ಮರ ನಡುವಿನ ಸಂಬಂಧ ಏನು? .....
2. ಮಹೇಶನಿಗೂ, ರಮೇಶನಿಗೂ ಇರುವ ಸಂಬಂಧ ಏನು?	6. ಮೀನಾ ಮತ್ತು ವೀರೇಶರ ಸಂಬಂಧ ಏನು? .....
3. ಮೀನಾಳ ಅತ್ತೆ ಯಾರು?	7. ಕಮಲಾಳ ಅತ್ತೆ ಯಾರು? .....
4. ವೀರೇಶನಿಗೆ ಶೋಭಾ ಏನಾಗಬೇಕು?	8. ಸೋಮಣ್ಣನಿಗೆ ಶೋಭಾ ಏನಾಗಬೇಕು? .....


@KTBS NOT TO BE REPUBLISHED

ಮರುದಿನ ಮೀನಾ ಶಾಲೆಗೆ ಹೋದಳು. ತಾನು ತಯಾರಿಸಿದ ತನ್ನ ಕುಟುಂಬ ನಕ್ಷೆಯನ್ನು ಗೆಳೆಯರಾದ ಸುಮಾ ಮತ್ತು ರವಿಯೊಂದಿಗೆ ಹಂಚಿಕೊಂಡಳು ಮತ್ತು ಅವರ ಕುಟುಂಬದ ನಕ್ಷೆಗಳನ್ನೂ ಗಮನಿಸಿದಳು.

ಸುಮಾಳ ಕುಟುಂಬ ನಕ್ಷೆ



ರವಿಯ ಕುಟುಂಬ ನಕ್ಷೆ



* ನನಗೆ ಅರ್ಥವಾಗಿದೆ ☐ * ನನಗೆ ಸಹಾಯ ಬೇಕಿದೆ ☐	ಶಿಕ್ಷಕರ ಸಹಿ : ದಿನಾಂಕ :

ಶಾಲೆಯಿಂದ ಮನೆಗೆ ಬರುತ್ತಿರುವಾಗ ಮೀನಾಳ ಮನಸ್ಸಿನಲ್ಲಿ ಒಂದೇ ಪ್ರಶ್ನೆ: "ಸುಮಾಳ ಕುಟುಂಬಕ್ಕಿಂತ ತನ್ನ ಕುಟುಂಬ ಹೇಗೆ ಭಿನ್ನ....?" ಹೀಗೆ ಯೋಚಿಸುತ್ತಿದ್ದ ಮೀನಾಳನ್ನು ಗಮನಿಸಿದ ಅವಳ ತಾತ,



ಮೀನಾ, ಏನು ಯೋಚಿಸುತ್ತಿರುವೆ?



ತಾತ, ಸುಮಾಳ ಮನೆಯಲ್ಲಿ 4 ಜನ ಮಾತ್ರ ಇದ್ದಾರೆ. ಆದರೆ ನಮ್ಮ ಮನೆಯಲ್ಲಿ 10 ಜನ...!! ಏಕೆ ಹೀಗೆ?



ಚಿಕ್ಕ ಕುಟುಂಬ: ತಂದೆ ತಾಯಿ ಮತ್ತು ಮಕ್ಕಳು
ದೊಡ್ಡ ಕುಟುಂಬ: ತಂದೆ, ತಾಯಿ, ಮಕ್ಕಳು ಮತ್ತು ಅಜ್ಜ–ಅಜ್ಜಿ, ದೊಡ್ಡಮ್ಮ–ದೊಡ್ಡಪ್ಪ, ಚಿಕ್ಕಪ್ಪ–ಚಿಕ್ಕಮ್ಮ ಮತ್ತು ಇತರ ಸಂಬಂಧಿಕರು.



ಮೀನಾ, ಸುಮಾಳ ಜೊತೆಯಲ್ಲಿ ಅವಳ ತಂದೆ–ತಾಯಿ ಮಾತ್ರ ಇದ್ದಾರೆ. ಆದರೆ ನಾವೆಲ್ಲರೂ ಒಟ್ಟಿಗೆ ಇದ್ದೇವೆ.



ಹೌದು ತಾತ, ಸುಮಾಳ ಅಜ್ಜ, ಅಜ್ಜಿ ಮತ್ತು ಚಿಕ್ಕಪ್ಪ ಹುಬ್ಬಳ್ಳಿಯಲ್ಲಿ ಇದ್ದಾರಂತೆ?

@KTBS NOT TO BE REPUBLISHED



ನಿಜ, ಸುಮಾಳ ತಂದೆಯು ಬ್ಯಾಂಕಿನಲ್ಲಿ ಕೆಲಸ ಮಾಡುವುದರಿಂದ ಅವರು ಇಲ್ಲಿ ವಾಸಿಸುತ್ತಿದ್ದಾರೆ.



ಓ, ಅದಕ್ಕೆ ಅಲ್ವಾ, ಅವಳು ರಜೆ ಬಂದಾಗ ತನ್ನ ತಾತನ ಊರಿಗೆ ಹೋಗಿ ಬರುವಳು.



ಹೌದು. ಕೆಲವೊಮ್ಮೆ ಹಬ್ಬ–ಸಮಾರಂಭಗಳಿಗೆ ನಾವು ಸಂಬಂಧಿಕರ ಮನೆಗಳಿಗೆ ಹೋಗಿ ಬರುತ್ತೇವೆ.



ಅಕ್ಟೋಬರ್ ರಜೆಗೆ ದಸರಾ ನೋಡಲು ಚಿಕ್ಕಪ್ಪನ ಮನೆಗೆ ಹೋಗೋಣವೇ?



ಹಾಗೆಯೇ ಆಗಲಿ, ಈಗ ಕೈ ತೊಳೆದು ಊಟ ಮಾಡೋಣ ಬಾ.

© @KTBS NOT TO BE REPUBLISHED



ಓದಿ ತಿಳಿಯೋಣ:

ಸಾಮಾನ್ಯವಾಗಿ ಒಂದು ಕುಟುಂಬದಲ್ಲಿ ಅಜ್ಜ–ಅಜ್ಜಿ, ತಂದೆ–ತಾಯಿ ಹಾಗೂ ಮಕ್ಕಳು ಇರುತ್ತಾರೆ. ಎಲ್ಲಾ ಕುಟುಂಬಗಳು ಒಂದೇ ರೀತಿಯಲ್ಲಿ ಇರುವುದಿಲ್ಲ. ಕೆಲವು ಕುಟುಂಬಗಳು ಕೇವಲ ತಂದೆ–ತಾಯಿ ಮತ್ತು ಮಕ್ಕಳನ್ನು ಒಳಗೊಂಡಿರುತ್ತವೆ. ಇಂತಹ ಕುಟುಂಬಗಳನ್ನು **'ಚಿಕ್ಕ ಕುಟುಂಬ'** ಎನ್ನುವರು.

ಇನ್ನು ಕೆಲವು ಕುಟುಂಬಗಳಲ್ಲಿ ತಂದೆ–ತಾಯಿ, ದೊಡ್ಡಪ್ಪ–ದೊಡ್ಡಮ್ಮ, ಚಿಕ್ಕಪ್ಪ–ಚಿಕ್ಕಮ್ಮ, ಅತ್ತೆ–ಮಾವ, ಅಕ್ಕ–ಅಣ್ಣ, ತಮ್ಮ–ತಂಗಿ ಹೀಗೆ ಎಲ್ಲರೂ ಒಂದೇ ಮನೆಯಲ್ಲಿ ವಾಸಿಸುತ್ತಿರುತ್ತಾರೆ. ಇಂತಹ ಕುಟುಂಬಗಳನ್ನು **'ದೊಡ್ಡ ಕುಟುಂಬ'** ಎನ್ನುವರು.

ಉದ್ಯೋಗ, ಶಿಕ್ಷಣ ಅಥವಾ ಇತರೆ ಕಾರಣಗಳಿಂದ ಕುಟುಂಬದ ಸದಸ್ಯರು ಬೇರೆ–ಬೇರೆ ಸ್ಥಳಗಳಲ್ಲಿ ವಾಸವಾಗಿರುತ್ತಾರೆ. ಮದುವೆ, ಜನನ ಇತ್ಯಾದಿ ಕಾರಣಗಳಿಂದ ಹೊಸ ಸದಸ್ಯರು ಕುಟುಂಬಕ್ಕೆ ಬಂದು ಸೇರುತ್ತಿರುತ್ತಾರೆ ಮತ್ತು ಬೇರೆ ಮನೆಗೆ ಹೋಗುತ್ತಾರೆ. ಸಾಮಾನ್ಯವಾಗಿ ಇವರು ರಜೆ, ಹಬ್ಬ, ಮದುವೆ, ಗೃಹ ಪ್ರವೇಶ ಇತ್ಯಾದಿ ಸಂದರ್ಭಗಳಲ್ಲಿ ಒಂದು ಕಡೆ ಬಂದು ಸೇರುವುದೂ ಉಂಟು.

ನಿನ್ನ ಕುಟುಂಬದ ನಕ್ಷೆ ರಚಿಸಿ, ಸದಸ್ಯರ ಹೆಸರುಗಳನ್ನು ಬರೆ.

@KTBS NOT TO BE REPUBLISHED

ಸುಗಮಕಾರರಿಗೆ ಸೂಚನೆ:
- ಮಕ್ಕಳು ತಯಾರಿಸಿದ ಕುಟುಂಬ ನಕ್ಷೆಯನ್ನು ಹಂಚಿಕೊಳ್ಳಲು ತಿಳಿಸುವುದು.
- ಸೂಕ್ತ ಹಿಮ್ಮಾಹಿತಿ ನೀಡುವುದು.

ಯೋಚಿಸಿ, ಉತ್ತರಿಸೋಣ:

1. ನಿನ್ನ ಕುಟುಂಬ, ಮೀನಾಳ ಕುಟುಂಬಕ್ಕಿಂತ ಭಿನ್ನವೇ?

ಹೌದಾದಲ್ಲಿ ಹೇಗೆ? _____

_____

ಇಲ್ಲವಾದಲ್ಲಿ ಹೇಗೆ? _____

_____

2. ಸಾಮಾನ್ಯವಾಗಿ ನೀನು ರಜೆಯಲ್ಲಿ ಯಾವ–ಯಾವ ಊರಿಗೆ ಹೋಗುವೆ? ಏಕೆ?

_____

_____

_____

_____

3. ಮೀನಾ, ದಿನದ ಎಲ್ಲ ವಿಷಯಗಳನ್ನು ತನ್ನ ತಾತನೊಂದಿಗೆ ಹಂಚಿಕೊಳ್ಳುತ್ತಾಳೆ. ನೀನು ಯಾರೊಂದಿಗೆ ಹಂಚಿಕೊಳ್ಳುವೆ?

_____

_____

4. ಮೀನಾ, ತನ್ನ ಅಜ್ಜನನ್ನು 'ತಾತ' ಎಂದು, ಅಮ್ಮನನ್ನು 'ಅವ್ವ' ಎಂದೂ ಕರೆಯುತ್ತಾಳೆ. ನಿನ್ನ ಕುಟುಂಬದ ಸದಸ್ಯರನ್ನು ನೀನು ಹೇಗೆ ಕರೆಯುವೆ? (ಮನೆಯಲ್ಲಿ ಇತರ ಸದಸ್ಯರು ಇದ್ದಲ್ಲಿ ಅವರನ್ನು ಹೇಗೆ ಕರೆಯುವೆ ಎಂದೂ ಬರೆ)

ಅಜ್ಜ –	ತಂದೆ –	ಅಣ್ಣ –	ತಮ್ಮ –
ಅಜ್ಜಿ –	ತಾಯಿ –	ಅಕ್ಕ –	ತಂಗಿ –
ದೊಡ್ಡಪ್ಪ –	ಚಿಕ್ಕಪ್ಪ –	ಸೋದರ ಅತ್ತೆ –	
ದೊಡ್ಡಮ್ಮ –	ಚಿಕ್ಕಮ್ಮ –	ಸೋದರ ಮಾವ –	

@KTBS NOT TO BE REPUBLISHED

ಮೀನಾ ಶಾಲೆಗೆ ಹೋಗಲು ಅವಳ ಕುಟುಂಬದ ಸದಸ್ಯರು ಹೇಗೆ ಸಹಾಯ ಮಾಡುತ್ತಾರೆ ಎಂಬುದನ್ನು ಚಿತ್ರ ನೋಡಿ ತಿಳಿ.















© KTBS NOT TO BE REPUBLISHED

ನಾವೂ ಯೋಚಿಸೋಣ ಹಾಗೂ ಸ್ನೇಹಿತರೊಂದಿಗೂ ಹಂಚಿಕೊಳ್ಳೋಣ:

ಮೀನಾ, ತನ್ನ ಬಿಡುವಿನ ವೇಳೆಯಲ್ಲಿ ಮನೆಯ ಕೆಲಸಗಳಲ್ಲಿ ಸಹಾಯ ಮಾಡುತ್ತಾಳೆ. ತಾತನಿಗೆ ದಿನಪತ್ರಿಕೆ ಓದಲು, ಅಪ್ಪ–ಅಮ್ಮನಿಗೆ ಅಡುಗೆ ಮಾಡಲು, ಅಂಗಡಿಯಿಂದ ಸಾಮಾನು ತರಲು, ತಂಗಿಗೆ ಚಿತ್ರ ಬರೆಯಲು ಸಹಾಯ ಮಾಡುತ್ತಾಳೆ ಮತ್ತು ಊಟವನ್ನು ಬಡಿಸುತ್ತಾಳೆ. ಅಜ್ಜಿಯ ಆರೈಕೆಯನ್ನೂ ಮಾಡುತ್ತಾಳೆ. ಇದರಿಂದಾಗಿ ಮೀನಾ ಎಲ್ಲರಿಗೂ ಅಚ್ಚು–ಮೆಚ್ಚು.

ಈ ಚಿತ್ರಗಳನ್ನು ಗಮನಿಸು. ಯಾವ ಕೆಲಸಗಳಲ್ಲಿ ನೀನು, ನಿನ್ನ ಕುಟುಂಬದ ಸದಸ್ಯರಿಗೆ ಸಹಾಯ ಮಾಡುವೆ? ಎಂಬುದನ್ನು ಗೆರೆ ಎಳೆದು ಹೊಂದಿಸು.



NOT TO BE REPUBLISHED

* ನಿನ್ನ ಕುಟುಂಬ ನಿನಗೆ ಹೇಗೆ ಸಹಾಯ ಮಾಡುತ್ತದೆ ಎಂಬುದನ್ನು ನಿನ್ನ ಸ್ನೇಹಿತರೊಂದಿಗೆ ಹಂಚಿಕೊ.

ನಾವೂ ಯೋಚಿಸೋಣ ಹಾಗೂ ಸ್ನೇಹಿತರೊಂದಿಗೆ ಹಂಚಿಕೊಳ್ಳೋಣ.

- ಕುಟುಂಬದ ಕೆಲಸಗಳಲ್ಲಿ ಪರಸ್ಪರ ಸಹಾಯ ಮಾಡಬೇಕು. ಏಕೆ?
- ನೆರೆಹೊರೆಯವರೊಂದಿಗೆ ಸ್ನೇಹದಿಂದ ಇರಬೇಕು. ಏಕೆ?

ಓದಿ ತಿಳಿಯೋಣ:

ಕುಟುಂಬದಲ್ಲಿನ ಹಿರಿಯರಿಗೆ ಗೌರವ ಕೊಡುವುದು, ಅಶಕ್ತರಿಗೆ ಸಹಾಯ ಮಾಡುವುದು, ಎಲ್ಲರೊಂದಿಗೆ ಸ್ನೇಹ, ಪ್ರೀತಿ ತೋರುವುದು ಇತ್ಯಾದಿಗಳನ್ನು ಪಾಲಿಸಬೇಕು. ಇದರಿಂದ ಪರಸ್ಪರ ಪ್ರೀತಿ, ಮಮತೆ, ಸಹಕಾರ, ನಂಬಿಕೆ, ಸಹಬಾಳ್ವೆಯುತ ಜೀವನವನ್ನು ನಡೆಸಲು ಸಾಧ್ಯವಾಗುತ್ತದೆ.

ಮೀನಾ, ತನ್ನ ತಾತನೊಂದಿಗೆ ದಿನಪತ್ರಿಕೆ ಓದುತ್ತಾ ಕುಳಿತಿದ್ದಳು. ಆಗ ಪೀಟರ್ ಅಂಕಲ್ ಬರುತ್ತಾರೆ. ಎಲ್ಲರಿಗೂ ಸಿಹಿ (sweets) ಕೊಟ್ಟು ತಮ್ಮ ಮನೆಗೆ ಕರೆಯುತ್ತಾರೆ. ಮೀನಾಳ ತಾತ ಅವರಿಗೆ ಕ್ರಿಸ್‌ಮಸ್ ಹಬ್ಬದ ಶುಭಾಶಯಗಳನ್ನು ಹೇಳುತ್ತಾರೆ.



ಪೀಟರ್ ಅಂಕಲ್ ಏಕೆ ಸ್ವೀಟ್ಸ್ ಕೊಟ್ಟರು?



ಹಬ್ಬದ ದಿನ ಸಿಹಿ ಹಂಚುವುದು ರೂಢಿ. ಕ್ರಿಸ್‌ಮಸ್ ಹಬ್ಬವಾದ್ದರಿಂದ ಸ್ವೀಟ್ಸ್ ಕೊಟ್ಟರು.



ತಾತ, ಕ್ರಿಸ್‌ಮಸ್ ಅಂದರೆ?



ಅದು ಕ್ರೈಸ್ತರ ಪವಿತ್ರ ಹಬ್ಬ. ನಾವು ದೀಪಾವಳಿ, ಯುಗಾದಿ ಹಬ್ಬಗಳನ್ನು ಆಚರಿಸುತ್ತೇವೆ. ಹಾಗೆಯೇ ಅವರು ಕ್ರಿಸ್‌ಮಸ್ ಹಬ್ಬ ಆಚರಿಸುತ್ತಾರೆ.

@KTBS NOT TO BE REPUBLISHED



ಹ್ಹಾ!! ಈಗ ನೆನಪಾಯಿತು. ಸಲೀಂ ಮನೆಯಲ್ಲಿ ರಂಜಾನ್ ಹಬ್ಬ ಆಚರಿಸುವುದನ್ನು ನಾನು ನೋಡಿದ್ದೆ.



ಹೌದು, ಬೇರೆ ಬೇರೆ ಧರ್ಮದವರು ಬೇರೆ ಬೇರೆ ಹಬ್ಬಗಳನ್ನು ಆಚರಿಸುತ್ತಾರೆ.



ಹೌದು ತಾತ, ಹಬ್ಬಗಳಲ್ಲಿ ಬಗೆಬಗೆಯ ತಿಂಡಿಗಳನ್ನು ತಯಾರಿಸುತ್ತಾರೆ ಮತ್ತು ಹೊಸ ಡ್ರೆಸ್‌ಗಳನ್ನು ಹಾಕಿಕೊಳ್ಳುತ್ತಾರೆ. ಅಂದು ಸಂಭ್ರಮವೋ ಸಂಭ್ರಮ..!



ಹೌದು. ನಾವೀಗ ಪೀಟರ್ ಅಂಕಲ್ ಮನೆಗೆ ಹೋಗೋಣ. ಅವರ ಹಬ್ಬದ ಆಚರಣೆಯಲ್ಲಿ ನಾವೂ ಭಾಗಿಯಾಗೋಣ.




ಹಾಗಾದರೆ, ನಾನು ಬಣ್ಣಗಳಿಂದ ಶುಭಾಶಯ ಪತ್ರವನ್ನು ತಯಾರಿಸುತ್ತೇನೆ.

@KTBS NOT TO BE REPUBLISHED

ಹೀಗೆ ಮಾಡೋಣ:

ಒಂದು ಬಿಳಿ ಹಾಳೆಯನ್ನು ತೆಗೆದುಕೊ. ಬಣ್ಣದ ಹಾಳೆಗಳಿಂದ ನಿನಗಿಷ್ಟವಾದ ಹೂವುಗಳನ್ನು, ವಿವಿಧ ಆಕೃತಿಗಳನ್ನು ಕತ್ತರಿಸು. ಚಿತ್ರದಲ್ಲಿ ತೋರಿಸಿರುವಂತೆ ಅಂಟಿಸಿ, ಒಂದು ಶುಭಾಷಯ ಪತ್ರವನ್ನು ತಯಾರಿಸಿ, ಶಾಲಾ ಸೂಚನಾ ಫಲಕದಲ್ಲಿ ಪ್ರದರ್ಶಿಸು. ಇದೇ ರೀತಿ ವಿವಿಧ ಬಗೆಯ ಶುಭಾಷಯ ಪತ್ರಗಳನ್ನು ತಯಾರಿಸಲು ಪ್ರಯತ್ನಿಸು.



ವಿವಿಧ ಹಬ್ಬ ಮತ್ತು ಸಮಾರಂಭಗಳ ಬಗ್ಗೆ ಒಂದು ಪಟ್ಟಿ ತಯಾರಿಸಲು ಮೀನಾ ಪ್ರಾರಂಭಿಸಿದ್ದಾಳೆ. ಅವಳಿಗೆ ಸಹಾಯ ಮಾಡೋಣ.

ಮನೆಯಲ್ಲಿ ಆಚರಿಸುವ ಹಬ್ಬಗಳು	ಶಾಲೆಯಲ್ಲಿ ಆಚರಿಸುವ ಹಬ್ಬಗಳು
1.	1.
2.	2.
3.	3.
4.	4.
5.	5.

@KIBS NOT TO BE REPUBLISHED

* ನನಗೆ ಅರ್ಥವಾಗಿದೆ ☐
* ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :
ದಿನಾಂಕ :

ಯೋಚಿಸಿ – ಉತ್ತರಿಸೋಣ :

1) ನೀನು ಹಬ್ಬದ ದಿನಗಳಲ್ಲಿ ಮಾಡುವ ಯಾವುದಾದರೂ ಎರಡು ಕೆಲಸಗಳನ್ನು ಬರೆ.

_____

_____

_____

_____

2) ಹಬ್ಬದ ಸಂದರ್ಭಗಳಲ್ಲಿ ನಿನ್ನ ಮನೆಯನ್ನು ಹೇಗೆ ಸ್ವಚ್ಛಗೊಳಿಸಿ ಅಲಂಕರಿಸುತ್ತಾರೆ?

_____

_____

_____

_____

3) ಹಬ್ಬದ ದಿನ ನಿನ್ನ ಮನೆಯಲ್ಲಿ ತಯಾರಿಸುವ ಯಾವುದಾದರೂ ನಾಲ್ಕು ವಿಶೇಷ ತಿನಿಸುಗಳನ್ನು ಪಟ್ಟಿಮಾಡು.

_____

_____

_____

_____

4) ನಿನ್ನ ಮನೆಯಲ್ಲಿ ಆಚರಿಸದಿರುವ ಆದರೆ ನಿನ್ನ ಗೆಳೆಯ/ಗೆಳತಿ/ಇತರರ ಮನೆಯಲ್ಲಿ ಆಚರಿಸುವ ಯಾವುದಾದರೂ ಎರಡು ಹಬ್ಬಗಳ ಹೆಸರು ಬರೆ.

_____

_____

_____

_____

@KTBS NOT TO BE REPUBLISHED

ನಿಮಗಿದು ತಿಳಿದಿರಲಿ:

ಪರಿಷೆ, ಉರುಸು ಜಾತ್ರೆ, ಇತ್ಯಾದಿಗಳಲ್ಲಿ ಎಲ್ಲ ಸಮುದಾಯಗಳ ಜನರು ಸೇರುತ್ತಾರೆ.

ತಾತನೊಂದಿಗೆ ಮೀನಾ ಮತ್ತು ಅವಳ ತಮ್ಮ ಜಾತ್ರೆ ನೋಡಲು ಊರಿಗೆ ಹೋಗುತ್ತಿದ್ದಾರೆ.





ತಾತ, ಜಾತ್ರೆಯಲ್ಲಿ ಏನೇನು ಇರುತ್ತವೆ?



ವಿವಿಧ ಆಟಿಕೆಗಳು, ಜೂಸ್ ಅಂಗಡಿ, ಮಿಠಾಯಿ ಮತ್ತಿತರ ತಿನಿಸುಗಳ ಅಂಗಡಿ, ಮನೆ ಬಳಕೆಯ ಸಾಮಗ್ರಿಗಳು ಇತ್ಯಾದಿಗಳು ಇರುತ್ತವೆ.

© NCERT NOT TO BE REPUBLISHED



ನಾವು ಆಟವಾಡಲು ಜಾತ್ರೆಯಲ್ಲಿ
ಏನೂ ಇರುವುದಿಲ್ಲವೇ?

ಮೇರಿ–ಗೋ–ರೌಂಡ್‌ನಲ್ಲಿ ಪುಟಾಣಿ
ಟ್ರೈನ್–ಸವಾರಿ, ಕುದುರೆ ಸವಾರಿ,
ಕ್ಯಾಚಿಂಗ್ ಪಿಶ್ ಇತ್ಯಾದಿ ಇರುತ್ತೆ.





ತಾತಾ, ನನ್ನನ್ನು
ಮೆರಿ–ಗೋ–ರೌಂಡ್‌ನಲ್ಲಿ ಆಟ
ಆಡಿಸಬೇಕು. ಮಿಠಾಯಿನೂ
ಕೊಡಿಸಬೇಕು. ಆಯ್ತಾ..?

ಆಯಿತು, ಬೇಗ ಬೇಗ ನಡೆಯಿರಿ.
ಜಾಗರೂಕರಾಗಿರಿ..! ಜನಜಂಗುಳಿ
ಇರುತ್ತದೆ. ನನ್ನ ಕೈಯನ್ನು ಬಿಡಬೇಡಿ...



@KTBS
NOT TO BE REPUBLISHED



ಓದಿ ತಿಳಿಯೋಣ:

ಎಲ್ಲ ಸಮುದಾಯದ ಜನರು ಒಂದುಗೂಡಿ ಸಂಭ್ರಮಿಸಲು ಜಾತ್ರೆಗಳನ್ನು ಆಚರಿಸುತ್ತಾರೆ. ಇದು ನಮ್ಮ ಸಂಪ್ರದಾಯ. ಇಲ್ಲಿ ಮಿಠಾಯಿ ಅಂಗಡಿ, ಹೋಟೆಲ್, ಆಟಿಕೆಗಳ ಅಂಗಡಿ, ಹೂ–ಹಣ್ಣು–ಕಾಯಿಗಳ ಅಂಗಡಿ, ಮನೆ ಬಳಕೆಯ ಸಾಮಗ್ರಿಗಳ ಅಂಗಡಿ ಇತ್ಯಾದಿಗಳು ಇರುತ್ತವೆ.

ಇಲ್ಲಿ ನಾಟಕಗಳ ಪ್ರದರ್ಶನಗಳನ್ನು ಏರ್ಪಡಿಸಿರುತ್ತಾರೆ. ಮಕ್ಕಳು ಮತ್ತು ಯುವಕರು ಆಟಗಳನ್ನು ಆಡುತ್ತಾರೆ, ವಿವಿಧ ರೀತಿಯ ಜೋಕಾಲಿಗಳನ್ನು ಜೀಕುತ್ತಾರೆ ಮತ್ತು ಸಾಹಸ ಪ್ರದರ್ಶನಗಳೂ ಇರುತ್ತವೆ. ದೂರದ ಊರುಗಳಿಂದ ಜನರು ಬಂದು ಸೇರುತ್ತಾರೆ.

ನಾವೂ ಯೋಚಿಸೋಣ ಹಾಗೂ ಸ್ನೇಹಿತರೊಂದಿಗೆ ಹಂಚಿಕೊಳ್ಳೋಣ:

- ನೀನು ಯಾವ ಜಾತ್ರೆಗೆ ಹೋಗಿರುವೆ?
- ನೀನು ಜಾತ್ರೆಯಲ್ಲಿ ಆಡಿರುವ ಅಥವಾ ನೋಡಿರುವ ಯಾವುದಾದರೂ ಎರಡೂ ಆಟಗಳ ಹೆಸರನ್ನು ಹೇಳು.
- ಒಂದು ವೇಳೆ ನೀನು ಜಾತ್ರೆಯಲ್ಲಿ ತಪ್ಪಿಸಿಕೊಂಡರೆ, ಪುನಃ ನಿನ್ನ ಕುಟುಂಬವನ್ನು ಸೇರಲು ಏನು ಮಾಡುವೆ ಮತ್ತು ಯಾರ ಸಹಾಯ ಪಡೆಯುವೆ?

© KTBS NOT TO BE REPUBLISHED

ನಾನು ಮತ್ತು ನನ್ನ ಕುಟುಂಬ (Family)

ಕುಟುಂಬದಲ್ಲಿ ಎರಡು ವಿಧ:
1. ಚಿಕ್ಕ ಕುಟುಂಬ
2. ದೊಡ್ಡ ಕುಟುಂಬ



* ಕುಟುಂಬದಲ್ಲಿನ ಸದಸ್ಯರು ಒಬ್ಬರಿಗೊಬ್ಬರು ಸಹಕರಿಸುತ್ತಾ ಒಟ್ಟಾಗಿ ಬಾಳುತ್ತಾರೆ.
* ಸದಸ್ಯರಲ್ಲಿ ಪರಸ್ಪರ ಪ್ರೀತಿ, ಸಹಕಾರ ಭಾವನೆ ಇರುತ್ತದೆ.

ಚಟುವಟಿಕೆ–1:

ನಿನ್ನ ಮನೆಯಲ್ಲಿ ನಿನಗೆ ಅತೀ ಇಷ್ಟವಾದ ಒಂದು ವಸ್ತುವಿನ ಚಿತ್ರ ತೆಗೆದು ಬಣ್ಣ ತುಂಬು.

@KTBS
NOT TO BE REPUBLISHED

ಈ ವಸ್ತು ನಿನಗೆ ಏಕೆ ಇಷ್ಟ?



_____

_____

_____

* ನನಗೆ ಅರ್ಥವಾಗಿದೆ	☐
* ನನಗೆ ಸಹಾಯ ಬೇಕಿದೆ	☐

ಶಿಕ್ಷಕರ ಸಹಿ :
ದಿನಾಂಕ :

ಚಟುವಟಿಕೆ–2:

ನಿನ್ನ ಸ್ನೇಹಿತರೊಂದಿಗೆ ಚರ್ಚಿಸಿ, ಉದಾಹರಣೆಯಂತೆ ಮಾಹಿತಿಯನ್ನು ಭರ್ತಿ ಮಾಡು.

ಕ್ರ ಸಂ	ಸ್ನೇಹಿತರ ಹೆಸರು	ಸ್ನೇಹಿತರ ಕುಟುಂಬದ ಸದಸ್ಯರು	ಒಟ್ಟು ಸದಸ್ಯರು
1	ಮೀನಾ	ಅಜ್ಜ, ಅಜ್ಜಿ, ದೊಡ್ಡಪ್ಪ, ದೊಡ್ಡಮ್ಮ, ಚಿಕ್ಕಪ್ಪ, ಚಿಕ್ಕಮ್ಮ, ತಂದೆ, ತಾಯಿ, ಅಣ್ಣ, ಅಕ್ಕ, ತಮ್ಮ	12 ಜನ
2			
3			
4			
5			
6			
7			

@KTBS NOT TO BE REPUBLISHED

ನನ್ನ ಕುಟುಂಬ – ನನ್ನ ಕಾಳಜಿ :

- ನನ್ನಿಂದ ಕುಟುಂಬದ ಸದಸ್ಯರು, ಸ್ನೇಹಿತರು ಹಾಗೂ ನೆರೆಹೊರೆಯವರಿಗೆ ನೋವು ಉಂಟಾಗಿದ್ದರೆ 'ನನ್ನನ್ನು ಕ್ಷಮಿಸಿ' ಎಂದು ಕೇಳುವೆ. ನೀನು.....?
- ನಾನು ಎಲ್ಲರೊಂದಿಗೆ 'ಸ್ನೇಹ ಮತ್ತು ಪ್ರೀತಿ'ಯಿಂದ ಇರುವೆ. ನೀನು.....?

* ನನಗೆ ಅರ್ಥವಾಗಿದೆ ☐
* ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :
ದಿನಾಂಕ :

ಚಟುವಟಿಕೆ–3:

ಈ ಪ್ರಶ್ನೆಗಳಿಗೆ 3 ಮಂದಿ ಹಿರಿಯರನ್ನು ಕೇಳಿ ಉತ್ತರವನ್ನು ಸಂಗ್ರಹಿಸು.

(ಒಬ್ಬರು ನಿಮ್ಮ ಮನೆಯ ಹಿರಿಯ ಸದಸ್ಯರಾಗಿರಲಿ. ಮತ್ತೊಬ್ಬರು ನೆರೆಹೊರೆಯ ಹಿರಿಯ ಸದಸ್ಯರಾಗಿರಲಿ. ಇನ್ನೊಬ್ಬರು ನಿನ್ನ ಸ್ನೇಹಿತರ ಮನೆಯ ಹಿರಿಯ ಸದಸ್ಯರಾಗಿರಲಿ)

ಕ್ರಮ ಸಂಖ್ಯೆ	ಪ್ರಶ್ನೆಗಳು	ನಿನ್ನ ಕುಟುಂಬದ ಹಿರಿಯ ಸದಸ್ಯರು	ನೆರೆಹೊರೆಯ ಕುಟುಂಬದ ಹಿರಿಯ ಸದಸ್ಯರು	ಸ್ನೇಹಿತರ ಕುಟುಂಬದ ಹಿರಿಯ ಸದಸ್ಯರು
1	ನೀವು ಎಷ್ಟು ವರ್ಷಗಳಿಂದ ಈ ಮನೆಯಲ್ಲಿ ವಾಸವಾಗಿದ್ದೀರಿ?			
2	10 ವರ್ಷಗಳ ಹಿಂದೆ ನಿಮ್ಮ ಕುಟುಂಬದಲ್ಲಿ ಎಷ್ಟು ಜನ ಸದಸ್ಯರು ಇದ್ದರು?			
3	ಈಗ ನಿಮ್ಮ ಕುಟುಂಬದಲ್ಲಿ ಎಷ್ಟು ಜನ ಸದಸ್ಯರು ಇದ್ದಾರೆ?			
4	ಹಿಂದೆ ನೀವು ಯಾವ ಯಾವ ಪ್ರಾಣಿಗಳನ್ನು ಸಾಕುತ್ತಿದ್ದೀರಿ?			
5	ಈಗ ನಿಮ್ಮ ಮನೆಯಲ್ಲಿ ಯಾವ ಯಾವ ಪ್ರಾಣಿಗಳನ್ನು ಸಾಕಿರುವಿರಿ?			
6				

@KTBS NOT TO BE REPUBLISHED



ನನ್ನ ಕಲಿಕೆಯ ಪ್ರಗತಿ:

ಕ್ರ ಸಂ	ಹೇಳಿಕೆಗಳು		
1	ನನ್ನ ಕುಟುಂಬದ ನಕ್ಷೆ ತಯಾರಿಸುವೆ.		
2	ನನ್ನ ಕುಟುಂಬದ ಸದಸ್ಯರ ಹೆಸರುಗಳನ್ನು ಹೇಳುವೆ.		
3	ನನ್ನ ಕುಟುಂಬದ ಸದಸ್ಯರಿಗೆ ಸಹಾಯ ಮಾಡುವೆ.		
4	ಶಾಲೆಯಲ್ಲಿ ಆಚರಿಸುವ ಹಬ್ಬಗಳನ್ನು ಹೆಸರಿಸುವೆ.		
5	ಯಾವುದಾದರೊಂದು ಹಬ್ಬದ ಬಗ್ಗೆ ಮಾತನಾಡುವೆ.		
6	ಜಾತ್ರೆಯಲ್ಲಿ ಅಥವಾ ಬೇರೆಡೆಯಲ್ಲಿ ತಪ್ಪಿಸಿಕೊಂಡಾಗ ಮತ್ತೆ ಮನೆಗೆ ಬರುವುದು ಹೇಗೆಂದು ತಿಳಿದುಕೊಂಡಿರುವೆ.		
7	ನಾನು ಎಲ್ಲರೊಂದಿಗೆ ಸ್ನೇಹ ಮತ್ತು ಪ್ರೀತಿಯಿಂದ ನಡೆದುಕೊಳ್ಳುವೆ.		

©KTBS NOT TO BE REPUBLISHED

ಸುಗಮಕಾರರಿಗೆ ಸೂಚನೆ:

- ಸ್ವಮೌಲ್ಯಮಾಪನದ ಹೇಳಿಕೆಗಳನ್ನು ಮಕ್ಕಳಿಗೆ ಅರ್ಥೈಸುವುದು.
- ಮಗುವಿನ ಕಲಿಕೆಯ ಬಗ್ಗೆ ರಚನಾತ್ಮಕ ಹಿಮ್ಮಾಹಿತಿ ನೀಡುವುದು.

*****

* ನನಗೆ ಅರ್ಥವಾಗಿದೆ ☐ * ನನಗೆ ಸಹಾಯ ಬೇಕಿದೆ ☐	ಶಿಕ್ಷಕರ ಸಹಿ : ದಿನಾಂಕ :

2

ಹಸಿರೇ ಉಸಿರು...!



ನಾನು ಎಲ್ಲರಂತೆ ಇಲ್ಲ..!

ಮೀನಾಳಿಗೆ 'ಹೂವಿನ ಗಿಡಗಳನ್ನು ಬೆಳೆಸುವುದು' ಎಂದರೆ ಅಚ್ಚು ಮೆಚ್ಚು. ಅವಳು ತನ್ನ ಮನೆಯ ಹಿತ್ತಲಿನಲ್ಲಿ ವಿವಿಧ ಹೂವಿನ ಗಿಡಗಳನ್ನು ಬೆಳೆಸಿರುತ್ತಾಳೆ. ಶಾಲೆಯಲ್ಲಿ ದತ್ತು ನೀಡಿದ ಗಿಡಗಳನ್ನೂ ಆರೈಕೆ ಮಾಡುತ್ತಾಳೆ. ಅವುಗಳಿಗೆ ಪ್ರತಿದಿನ ನೀರು ಹಾಕುತ್ತಾಳೆ. ಆಗಾಗ್ಗೆ ಗಿಡಗಳ ಸುತ್ತಲೂ ಪಾತಿ ಮಾಡುತ್ತಾಳೆ. ಬಿಡುವಿನ ಸಮಯದಲ್ಲಿ ಮೀನಾ, ತನ್ನ ತಂದೆಯ ಜೊತೆಯಲ್ಲಿ ಒಣಎಲೆಗಳಿಂದ ತಯಾರಿಸಿದ ಗೊಬ್ಬರ ಹಾಕುತ್ತಾಳೆ. ರಜೆಯ ದಿನ ತನ್ನ ಮನೆಯವರೊಂದಿಗೆ ತೋಟಕ್ಕೂ ಹೋಗುವ ಅಭ್ಯಾಸ ಅವಳಿಗಿದೆ.

ಒಂದು ದಿನ ಮೀನಾ ತನ್ನ ಮನೆಯ ಹಿತ್ತಲಿನಲ್ಲಿ ಕೆಲಸ ಮಾಡುತ್ತಿರುವಾಗ ಸುಮಾ ಬರುತ್ತಾಳೆ. ಇಬ್ಬರೂ ತೋಟವನ್ನು ನೋಡಲು ಹೋಗುತ್ತಾರೆ.

©KTBS NOT TO BE PUBLISHED



ಚಿತ್ರದಲ್ಲಿರುವ ಹೂವಿನ ಗಿಡಗಳನ್ನು ಗಮನಿಸಿ ಇಲ್ಲಿ ಹೆಸರಿಸು.

ಯೋಚಿಸಿ ಬರೆ:

ನೀನು ನೋಡಿರುವ ಯಾವುದಾದರೂ 4 ಹೂವಿನ ಗಿಡಗಳ ಹೆಸರನ್ನು ಬರೆ.

1.
2.
3.
4.



ಮಾದರಿಯಂತೆ ಅಕ್ಷರದಿಂದ ಚಿತ್ರ ರಚಿಸು.




@KTBS NOT TO BE REPUBLISHED

ಇದೇ ರೀತಿ ವಿವಿಧ ಅಕ್ಷರಗಳನ್ನು ಬಳಸಿ ಅಂದವಾದ ಚಿತ್ರಗಳನ್ನು ರಚಿಸಿ ಪ್ರದರ್ಶಿಸು.

ಮೀನಾ ಅವರ ತೋಟದಲ್ಲಿ ಬೆಳೆದಿರುವ ವಿವಿಧ ರೀತಿಯ ಹಣ್ಣು, ತರಕಾರಿ ಮತ್ತು ಗಿಡ – ಮರಗಳನ್ನು ಸುಮಾಳಿಗೆ ತೋರಿಸಿದಳು. ಅವುಗಳನ್ನು ನೀನು ಹೆಸರಿಸು.








@KTBS NOT TO BE REPUBLISHED

ಈ ಪಟ್ಟಿಯಲ್ಲಿರುವ ಹಾಗೂ ನಿನಗೆ ತಿಳಿದಿರುವ ಸಸ್ಯಗಳ ವಿವರವನ್ನು ಸಂಗ್ರಹಿಸಿ. ಹೆಸರು ಬರೆದು ಸೂಕ್ತವೆನಿಸಿದ ಕಾಲಂನಲ್ಲಿ ಸರಿ ಗುರುತು ಹಾಕು.

ಕ್ರ. ಸಂ.	ಸಸ್ಯದ ಹೆಸರು	ಗಾತ್ರ		ವಿಧ				ಬಣ್ಣ	
		ಸಣ್ಣ	ದೊಡ್ಡ	ಬಳ್ಳಿ	ಮೂಲಿಕೆ	ಪೊದರು	ಮರ	ಹಸಿರು	ಇತರೆ
1	ತುಳಸಿ								
2	ಹುರುಳಿ								
3	ಗುಲಾಬಿ								
4	ದ್ರಾಕ್ಷಿ								
5	ಹುಣಸೆ								
6	ನಿಂಬೆ								
7	ಕುಂಬಳ								
8	ಮನಿ ಪ್ಲಾಂಟ್								
9									
10									

@KTBS NOT TO BE REPUBLISHED

ಸಸ್ಯಗಳಲ್ಲಿ ಬೇರೆ ಬೇರೆ ಆಕಾರ, ಎತ್ತರ–ಗಾತ್ರ ಇತ್ಯಾದಿ ವೈವಿಧ್ಯತೆಯನ್ನು ಕಾಣುತ್ತೇವೆ. ಮಣ್ಣು, ನೀರು, ಹವಾಮಾನ ಮತ್ತು ಆಯಾ ಪ್ರದೇಶದಲ್ಲಿ ಬೀಳುವ ಮಳೆಯ ಪ್ರಮಾಣ ಮತ್ತು ಋತುಮಾನಕ್ಕೆ ತಕ್ಕಂತೆ ಸಸ್ಯಗಳು ಬೆಳೆಯುತ್ತವೆ.

ಮಲೆನಾಡಿನಲ್ಲಿ ಕಾಫಿ, ಅಡಿಕೆ ಸಸ್ಯಗಳು ಕಂಡುಬಂದರೆ ಕರಾವಳಿಯಲ್ಲಿ ತೆಂಗು, ಬಯಲು ಸೀಮೆಯಲ್ಲಿ ಜಾಲಿ, ಮಾವು, ಬೇವು ಇತ್ಯಾದಿಗಳು ಕಂಡು ಬರುತ್ತವೆ.

ಕರ್ನಾಟಕದ ಉತ್ತರ ಭಾಗಗಳಲ್ಲಿ ಹತ್ತಿ, ತೊಗರಿ, ಶೇಂಗಾ, ಜೋಳ ಹೆಚ್ಚಾಗಿ ಬೆಳೆದರೆ, ದಕ್ಷಿಣದಲ್ಲಿ ಭತ್ತ, ರಾಗಿ, ಕಬ್ಬು, ವಿವಿಧ ಕಾಳುಗಳನ್ನು ಹೆಚ್ಚಾಗಿ ಬೆಳೆಯುತ್ತಾರೆ.



ಎತ್ತರ, ದಪ್ಪ, ಕಂದು ಬಣ್ಣದಿಂದ ಕೂಡಿದ್ದು ಗಟ್ಟಿಯಾದ ಕಾಂಡವನ್ನು ಹೊಂದಿರುವ ಸಸ್ಯಗಳನ್ನು 'ಮರ'ಗಳು ಎನ್ನುವರು. ಉದಾ: ಮಾವಿನ ಮರ, ಬೇವಿನ ಮರ



ಕಾಂಡ ಚಿಕ್ಕದಾಗಿರುವ ಮಧ್ಯಮ ಗಾತ್ರದ ಸಸ್ಯಗಳನ್ನು 'ಪೊದರುಗಳು' ಎನ್ನುವರು. ಉದಾ: ಗುಲಾಬಿ ಗಿಡ, ದಾಸವಾಳ ಗಿಡ





ಕಾಂಡವು ತೆಳುವಾಗಿದ್ದು, ನೆಲದ ಮೇಲೆ ಹರಡಿರುವ ಸಸ್ಯಗಳನ್ನು 'ಬಳ್ಳಿಗಳು' ಎನ್ನುವರು. ಉದಾ: ಕುಂಬಳ ಬಳ್ಳಿ, ಹಾಗಲ ಬಳ್ಳಿ, ಕಲ್ಲಂಗಡಿ ಬಳ್ಳಿ

ನಿಮಗಿದು ತಿಳಿದಿರಲಿ:

ಕಾಂಡಗಳ ಆಧಾರದ ಮೇಲೆ ಸಸ್ಯಗಳನ್ನು ಮೂಲಿಕೆಗಳು, ಪೊದರುಗಳು ಮತ್ತು ಮರಗಳೆಂದು ವರ್ಗೀಕರಿಸಲಾಗಿದೆ.

© DSERT NOT TO BE REPUBLISHED

ಕೆಲವು ಸಸ್ಯಗಳು ವಿಶಿಷ್ಟ, ಗುಣಲಕ್ಷಣಗಳನ್ನು ಹೊಂದಿವೆ. ಉದಾ: ತುಳಸಿ, ಪುದಿನಾ, ಮರುಗ, ದವನ, ಕಾಮಕಸ್ತೂರಿ, ಇತ್ಯಾದಿಗಳು ವಿಶೇಷ ಪರಿಮಳವನ್ನು ಬೀರುತ್ತವೆ ಮತ್ತು ಔಷಧೀಯ ಗುಣವನ್ನೂ ಹೊಂದಿರುತ್ತವೆ.








ಎಲೆಗಳಲ್ಲಿ ವೈವಿಧ್ಯತೆಯನ್ನು ಕಾಣುತ್ತೇವೆ. ಅವುಗಳೆಂದರೆ ಅಗಲವಾದ ಎಲೆಗಳು, ಉದ್ದವಾದ ಎಲೆಗಳು, ಮೊನಚಾದ ಎಲೆಗಳು, ಅಂಕು–ಡೊಂಕಾದ ಅಂಚುಳ್ಳ ಎಲೆಗಳು ಇತ್ಯಾದಿ.





NOT TO BE REPUBLISHED

ನೀನು ನೋಡಿರುವ ಅಥವಾ ಕೇಳಿರುವ ಸಸ್ಯಗಳ ಬಗ್ಗೆ ಸೂಚನೆಯನುಸಾರ ಬರೆ.

1. ಉದ್ದವಾದ ಎಲೆಗಳಿರುವ ಸಸ್ಯಗಳು

_____ _____

2. ಚೂಪಾದ ಎಲೆಗಳಿರುವ ಸಸ್ಯಗಳು

_____ _____

3. ಬಣ್ಣದ ಎಲೆಗಳಿಂದ ಕೂಡಿದ ಸಸ್ಯಗಳು

_____ _____

4. ವಾಸನೆಯನ್ನು ಹೊಂದಿರುವ ಎಲೆಗಳಿರುವ ಸಸ್ಯಗಳು

_____ _____

5. ದಪ್ಪವಾದ ತೊಗಟೆಯನ್ನು ಹೊಂದಿರುವ ಮರಗಳು

_____ _____

6. ತೆಳುವಾದ ತೊಗಟೆಯನ್ನು ಹೊಂದಿರುವ ಸಸ್ಯಗಳು

_____ _____

@KTBS NOT TO BE REPUBLISHED

ಹೀಗೆ ಸಸ್ಯಗಳಲ್ಲಿನ ವಿವಿಧ ಎಲೆ, ಹೂ, ಕಾಂಡ, ತೊಗಟೆ ಇತ್ಯಾದಿಗಳನ್ನು ಗಮನಿಸುತ್ತಿದ್ದ ಮೀನಾ ಮತ್ತು ಸುಮಾಳಿಗೆ ಅವರ ತೋಟದ ಮನೆಯಲ್ಲಿದ್ದ ಕೋಳಿ ಮತ್ತು ಮರಿಗಳು, ನೀರಿನಲ್ಲಿ ಮೀನು ಹಿಡಿಯಲು ಈಜುತ್ತಿದ್ದ ಬಾತುಕೋಳಿಗಳು ಮತ್ತು ಗುಂಪು ಗುಂಪಾಗಿದ್ದ ಕುರಿಗಳು ತಿನ್ನುತ್ತಿದ್ದ ಆಹಾರ ಹಾಗೂ ಅವು ಉಂಟು ಮಾಡುತ್ತಿದ್ದ ಶಬ್ದಗಳು ಕುತೂಹಲವನ್ನು ಮೂಡಿಸಿದವು

* ನನಗೆ ಅರ್ಥವಾಗಿದೆ ☐ * ನನಗೆ ಸಹಾಯ ಬೇಕಿದೆ ☐	ಶಿಕ್ಷಕರ ಸಹಿ : ದಿನಾಂಕ :

* ಇಲ್ಲಿ ಕೆಲವು ಪಕ್ಷಿಗಳ ಚಿತ್ರಗಳನ್ನು ನೀಡಿದೆ. ಅವುಗಳ ದೇಹದ ರಚನೆಯನ್ನು ಗಮನಿಸಿ ಸ್ನೇಹಿತರೊಂದಿಗೆ ಚರ್ಚಿಸು. ಹಿರಿಯರಿಂದ ವಿವರ ಸಂಗ್ರಹಿಸಿ ಬರೆ.









ಕ್ರ ಸಂ.	ಪಕ್ಷಿಗಳ ಹೆಸರು	ಗಾತ್ರ (ದೊಡ್ಡದು/ ಚಿಕ್ಕದು)	ವಾಸಿಸುವ ಪ್ರದೇಶ	ಆಹಾರ
1				
2				
3				
4				
5				
6				
7				

©KTBS NOT TO BE REPUBLISHED

* ನನಗೆ ಅರ್ಥವಾಗಿದೆ ☐
* ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :
ದಿನಾಂಕ :

ಸುಗಮಕಾರರಿಗೆ ಸೂಚನೆ: ತಮ್ಮ ನೆರೆಹೊರೆ, ಪರಿಸರದಲ್ಲಿನ ಜನ ಹಾಗೂ ವಸ್ತುಗಳಿಂದ ಅನೇಕ ಸಂಗತಿಗಳನ್ನು ಮಕ್ಕಳು ಕಲಿಯುತ್ತಿರುತ್ತಾರೆ. ಇಂತಹ ಚಟುವಟಿಕೆಗಳಿಂದ ಮಕ್ಕಳಿಗೆ ಪರಿಸರವನ್ನು ವೀಕ್ಷಿಸಲು ಮತ್ತು ಅರ್ಥಮಾಡಿಕೊಳ್ಳಲು ಅವಕಾಶ ಕಲ್ಪಿಸುವುದು.

* ಮಾಡಿ–ನೋಡು:

1. ಗ್ರಹಿಸು–ಹೆಸರಿಸು: ನಿಂಬು, ಮಾವು, ಬೇವು, ತುಳಸಿ, ಪುದಿನಾ ಮತ್ತು ದನಿಯಾ ಸಸ್ಯಗಳ ಎಲೆಗಳನ್ನು ಸಂಗ್ರಹಿಸು. ಅವುಗಳನ್ನು ಒಣಗಿಸಿ ಪುಡಿ ಮಾಡು ಮತ್ತು ವಾಸನೆ ಗ್ರಹಿಸು. ಅವುಗಳ ವಾಸನೆ ಒಂದೇ ರೀತಿಯಾಗಿ ಇವೆಯೇ?

ಕೇವಲ ವಾಸನೆ ಗ್ರಹಿಸಿ 'ಇದು ಯಾವ ಸಸ್ಯದ ಎಲೆ' ಎಂದು ಹೇಳಬಲ್ಲೆಯಾ?

2. ಎಲೆಗಳಿಂದ ವಿವಿಧ ಆಕೃತಿ ರಚಿಸು: ಈ ಚಿತ್ರಗಳನ್ನು ಗಮನಿಸು. ಅವು ಒಣಗಿದ ಎಲೆಗಳಿಂದ ಮಾಡಲ್ಪಟ್ಟಿವೆ. ಉದುರಿದ ಎಲೆಗಳನ್ನು ಸಂಗ್ರಹಿಸು. ವಿವಿಧ ಪ್ರಾಣಿ, ಪಕ್ಷಿಗಳ ಆಕಾರದಲ್ಲಿ ಜೋಡಿಸಿ, ನೋಟ್ ಪುಸ್ತಕದಲ್ಲಿ ಅಂಟಿಸು. ಅವುಗಳ ಹೆಸರು ಬರೆ.





NOT TO BE REPUBLISHED

3. ಒತ್ತು ಚಿತ್ರ ರಚಿಸು:

- ಬಿಳಿ ಹಾಳೆ ಮತ್ತು ಕ್ರೆಯಾನ್/ಕಲರ್ ಪೆನ್ಸಿಲ್ಲನ್ನು ತೆಗೆದುಕೊ.
- ಸಂಗ್ರಹಿಸಿದ ಎಲೆಗಳನ್ನು ಟೇಬಲ್/ನೆಲದ ಮೇಲೆ ಇಡು.
- ಎಲೆಯ ನರಗಳು ಮೇಲ್ಭಾಗದಲ್ಲಿ ಕಾಣುವಂತೆ ಇರಲಿ.
- ಎಲೆಯ ಮೇಲೆ ಬಿಳಿ ಹಾಳೆಯನ್ನು ಇಡು.
- ಕ್ರೆಯಾನ್/ಕಲರ್ ಪೆನ್ಸಿಲ್‌ನಿಂದ ಉಜ್ಜು.
- ಪೇಪರ್ ಮತ್ತು ಎಲೆ ಅಲುಗಾಡದಂತೆ ನೋಡಿಕೊ.
- ಸಿದ್ಧವಾದ ಒತ್ತು ಚಿತ್ರವನ್ನು ತರಗತಿಯಲ್ಲಿ ಪ್ರದರ್ಶಿಸು.



4. ತೊಗಟೆಯಿಂದ ಚಿತ್ರ ರಚನೆ :

- ಚಿತ್ರವನ್ನು ಗಮನಿಸು.
- ಮರದ ತೊಗಟೆಯ ಮೇಲೆ ಬಿಳಿ ಹಾಳೆಯನ್ನು ಇಟ್ಟು ಕ್ರಯಾನ್‌ನಿಂದ ಉಜ್ಜು.
- ಮೂಡಿದ ಆಕೃತಿಯನ್ನು ಪ್ರದರ್ಶಿಸು ಮತ್ತು ಕೃತಿ ಸಂಪುಟದಲ್ಲಿ ಸಂಗ್ರಹಿಸು.





*** ಚಿತ್ರ ಗಮನಿಸು. ಮರವು ಯಾರಿಗೆ, ಹೇಗೆ ಸಹಾಯಕವಾಗಿದೆ? ಎಂಬುದನ್ನು ಖಾಲಿ ಜಾಗದಲ್ಲಿ ಬರೆ.**



@KTBS
NOT TO BE REPUBLISHED

ಓದಿ ತಿಳಿಯೋಣ:

ರಬ್ಬರ್ : ಇದು ಒಂದು ಜಾತಿಯ ಮರದ ತೊಗಟೆಯನ್ನು ಕತ್ತರಿಸಿದಾಗ ದೊರೆಯುವ ಹಾಲಿನಿಂದ ತಯಾರಿಸುವ ವಸ್ತುವಾಗಿದೆ. ಎಲ್ಲಾ ರಬ್ಬರ್‌ಗಳನ್ನು ಹಾಲಿನಿಂದ ತಯಾರಿಸುವುದಿಲ್ಲ.

ತೆಂಗಿನ ನಾರು: ತೆಂಗಿನ ಸಸ್ಯದಿಂದ ದೊರೆಯುವ ಒಂದು ನೈಸರ್ಗಿಕ ನಾರು. ಇದರಿಂದ ದಾರ, ಚೀಲ ಇತ್ಯಾದಿಗಳನ್ನು ಸಿದ್ಧಪಡಿಸುತ್ತಾರೆ.

ಬಿದಿರು: ಇದು ಅತ್ಯಂತ ಎತ್ತರವಾಗಿ ಬೆಳೆಯುವ ಹುಲ್ಲಿನ ಜಾತಿಗೆ ಸೇರಿದೆ. ಇದರಿಂದ ಮನೆಗಳನ್ನು ನಿರ್ಮಾಣ ಮಾಡುತ್ತಾರೆ. ಆನೆಗಳಿಗೆ ಬಿದಿರು ಹುಲ್ಲು ಇಷ್ಟದ ಆಹಾರವಾಗಿದೆ.



ಯೋಜನೆ: ನನ್ನ ಬೆಳೆಸು, ನಿನ್ನ ಉಳಿಸುವೆ..!!

*** ನಿನ್ನ ಮನೆ ಅಥವಾ ಶಾಲೆಯಲ್ಲಿನ ಒಂದು ಮರವನ್ನು ಆಯ್ಕೆ ಮಾಡು. ಅದರ ಜೊತೆಗೆ ಗೆಳೆತನವನ್ನು ಮಾಡಿಕೊ. ಅದು ಶಾಶ್ವತ ಗೆಳೆತನವಾಗಲಿ..!**

❖ ನಿನ್ನ ಮರ ಗೆಳೆಯನಿಗೆ ನೀನು ನೀಡುವ ವಿಶೇಷ ಹೆಸರನ್ನು ಬರೆ.

_____

❖ ನಿನ್ನ ಮರ ಗೆಳೆಯ ಕೊಡುವ ಹೂವು–ಕಾಯಿ–ಹಣ್ಣುಗಳ ಹೆಸರು ಬರೆ.

_____

❖ ನಿನ್ನ ಮರ ಗೆಳೆಯನಲ್ಲಿ ವಾಸಿಸುವ ಪಕ್ಷಿಗಳ ಹೆಸರು ಬರೆ.

_____

❖ ನಿನ್ನ ಮರ ಗೆಳೆಯನಲ್ಲಿ ವಾಸಿಸುವ ಕೀಟಗಳ ಹೆಸರು ಬರೆ.

_____

❖ ನಿನ್ನ ಮರ ಗೆಳೆಯನಲ್ಲಿ ವಾಸಿಸುವ ಪ್ರಾಣಿಗಳ ಹೆಸರು ಬರೆ.

_____

❖ ನಿನ್ನ ಮರ ಗೆಳೆಯನ ಬಗ್ಗೆ ಇನ್ನಷ್ಟು ಹೆಚ್ಚಿನದನ್ನು ತಿಳಿದು ಇತರರೊಂದಿಗೆ ಹಂಚಿಕೊ.

NOT TO BE REPUBLISHED @KTBS

* ನನಗೆ ಅರ್ಥವಾಗಿದೆ ☐ * ನನಗೆ ಸಹಾಯ ಬೇಕಿದೆ ☐	ಶಿಕ್ಷಕರ ಸಹಿ : ದಿನಾಂಕ :

ನಮ್ಮ ಈ ಸುಂದರ ಭೂಮಿಯನ್ನು ಇನ್ನೂ ಹೆಚ್ಚು ಸುಂದರಗೊಳಿಸಲು ಇದು ಸಹಾಯಕವಾಗುತ್ತದೆ ಎಂದು ಭಾವಿಸುವ ಒಂದು ವಸ್ತುವಿನ ಚಿತ್ರ ಬಿಡಿಸಿ ಬಣ್ಣ ತುಂಬು.

@KTBS
NOT TO BE REPUBLISHED

ಈ ವಸ್ತು ಹೇಗೆ ಸುಂದರಗೊಳಿಸುತ್ತದೆ ಎಂದು ನಿನ್ನ ಸ್ನೇಹಿತರೊಂದಿಗೆ ಅನಿಸಿಕೆಯನ್ನು ಹಂಚಿಕೋ.

ಮಾಡಿ–ನೋಡು:

- ಚಿತ್ರ ಗಮನಿಸಿ, ಒಂದು ಸಸ್ಯವನ್ನು ಬೆಳೆಸು.
- ನೀನು ಅನುಸರಿಸಿದ ಕ್ರಮಗಳನ್ನು ಬರೆ.


ಬಳಸಿದ ಡಬ್ಬಿ


ಫಲವತ್ತಾದ ಮಣ್ಣು


ಬೀಜಗಳು


ನೀರು



ಕ್ರಮಗಳು :

@KTBS NOT TO BE REPUBLISHED


ಸುಗಮಕಾರರಿಗೆ ಸೂಚನೆ: ಮಕ್ಕಳಿಗೆ ಸಸ್ಯ/ಮರಗಳೊಂದಿಗೆ ಗೆಳೆತನವನ್ನು ಮಾಡಲು, ಅವುಗಳಿಗೆ ನಿಯಮಿತವಾಗಿ ನೀರುಣಿಸಲು ಹಾಗೂ ಸೂಕ್ಷ್ಮವಾಗಿ ಗಮನಿಸಲು ಪ್ರೋತ್ಸಾಹಿಸಿರಿ. ಸೀಡ್ ಬಾಲ್ ತಯಾರಿಸಿ, ಬಯಲು ಪ್ರದೇಶಗಳಲ್ಲಿ ಗಿಡ ಮರ ಬೆಳೆಸಲು ಸಹಕರಿಸಿ.

*****

3

ನಿಮ್ಮ ಹಾಗೆಯೇ ನಾವು...!


ಚಿತ್ರದಲ್ಲಿ ವಿವಿಧ ರೀತಿಯ ಪ್ರಾಣಿ, ಪಕ್ಷಿ, ಕೀಟಗಳನ್ನು ಕಾಣುತ್ತಿರುವೆ ಅಲ್ಲವೇ...? ಪ್ರಾಣಿಗಳಿಗೆ ನೀಲಿ ಬಣ್ಣ, ಪಕ್ಷಿಗಳಿಗೆ ಹಸಿರು ಬಣ್ಣ ಹಾಗೂ ಕೀಟಗಳಿಗೆ ಕೆಂಪು ಬಣ್ಣ ತುಂಬು. (ಬಣ್ಣದ ಪೆನ್ಸಿಲ್/ಕ್ರೆಯಾನ್ ಬಳಸು)





©KTBS NOT TO BE REPUBLISHED

ಇಲ್ಲಿ ಕೆಲವು ಪ್ರಾಣಿ, ಪಕ್ಷಿ, ಕೀಟಗಳ ಚಿತ್ರಗಳನ್ನು ನೀಡಿದೆ. ಅವುಗಳನ್ನು ಸೂಕ್ಷ್ಮವಾಗಿ ಗಮನಿಸು. ಯಾವ ಪ್ರಾಣಿಗಳ ಕಿವಿಗಳನ್ನು ನೋಡಲು ಸಾಧ್ಯ ಮತ್ತು ಯಾವ ಪ್ರಾಣಿಗಳ ಕಿವಿಗಳನ್ನು ನೋಡಲು ಸಾಧ್ಯವಿಲ್ಲ ಎಂದು ಪಟ್ಟಿ ಮಾಡು.









@KTBS NOT TO BE REPUBLISHED

ಈ ಪ್ರಾಣಿಗಳಲ್ಲಿ ಕಿವಿಗಳನ್ನು ಕಾಣಲು ಸಾಧ್ಯ	ಈ ಪ್ರಾಣಿಗಳಲ್ಲಿ ಕಿವಿಗಳನ್ನು ಕಾಣಲು ಸಾಧ್ಯವಿಲ್ಲ
•	•
•	•
•	•
•	•
•	•




© SCERT NOT TO BE REPUBLISHED

ಈ ಚಿತ್ರಗಳನ್ನು ಗಮನಿಸು. ಇವುಗಳ ಕಿವಿಗಳು ಕಾಣುತ್ತಿವೆಯೇ? ಹೌದು/ಇಲ್ಲ ☐

ಯೋಚಿಸು..!!

ನಮ್ಮ ಕಣ್ಣಿಗೆ ಕಿವಿಗಳು ಕಾಣಿಸುತ್ತಿಲ್ಲ ಎಂದರೆ ಅವುಗಳಿಗೆ ಕಿವಿಗಳು ಇಲ್ಲ ಎಂದು ಅರ್ಥವೇ?

ಪಕ್ಷಿಗಳ ತಲೆಯ ಭಾಗದಲ್ಲಿ ಸಣ್ಣ ರಂಧ್ರಗಳು ಇದ್ದು ರೆಕ್ಕೆಗಳಿಂದ ಮುಚ್ಚಲ್ಪಟ್ಟಿರುತ್ತವೆ. ಅವುಗಳ ಮೂಲಕ ಶಬ್ಧವನ್ನು ಆಲಿಸುತ್ತವೆ. ಹಲ್ಲಿಯ ತಲೆಯ ಭಾಗದಲ್ಲಿ ಸಣ್ಣ ರಂಧ್ರಗಳು ಕಾಣುತ್ತವೆ. ಅವುಗಳೇ ಕಿವಿಗಳು. ಮೊಸಳೆಯು ಕೂಡಾ ಕಿವಿಗಳನ್ನು ಹೊಂದಿದೆ. ಆದರೆ ಅವುಗಳನ್ನು ಸುಲಭವಾಗಿ ನೋಡಲು ಸಾಧ್ಯವಿಲ್ಲ.


* ನನಗೆ ಅರ್ಥವಾಗಿದೆ	☐
* ನನಗೆ ಸಹಾಯ ಬೇಕಿದೆ	☐

ಶಿಕ್ಷಕರ ಸಹಿ :
ದಿನಾಂಕ :

ಪ್ರಾಣಿ–ಪಕ್ಷಿಗಳೆರಡರಲ್ಲೂ ಆಕಾರ, ಗಾತ್ರ, ಬಣ್ಣ, ದೇಹ ರಚನೆ, ಆವಾಸ ಮತ್ತು ಆಹಾರಾಭ್ಯಾಸಗಳಲ್ಲಿ ವೈವಿಧ್ಯತೆ ಇರುವುದನ್ನು ಕಾಣಬಹುದು.

ದಪ್ಪ ಚರ್ಮ ಹೊಂದಿರುವ ಘೇಂಡಾಮೃಗ, ಮೈ ತುಂಬಾ ಮುಳ್ಳುಗಳಿರುವ ಮುಳ್ಳು ಹಂದಿ, ಮರಿಯನ್ನು ಚೀಲದಲ್ಲಿ ಹೊತ್ತಿರುವ ಕಾಂಗರೂ ಎಲ್ಲರಿಗೂ ವಿಶೇಷ ಎನಿಸುತ್ತವೆ.

ಆಹಾರ, ನೀರು, ರಕ್ಷಣೆ ಮತ್ತು ವಿಶ್ರಾಂತಿಗಾಗಿ ಪ್ರಾಣಿಗಳೂ ಕೂಡಾ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವಲಸೆ ಹೋಗುತ್ತವೆ.



© KSEEB NOT TO BE REPUBLISHED

ಪ್ರಾಣಿಗಳು ಸ್ವತಂತ್ರವಾಗಿ ಕಾಡುಗಳಲ್ಲಿ, ಬೆಟ್ಟ–ಗುಡ್ಡಗಳಲ್ಲಿ, ನದಿ–ಸರೋವರಗಳಲ್ಲಿ ಮತ್ತು ಮರುಭೂಮಿಯಲ್ಲಿ ವಾಸ ಮಾಡುತ್ತವೆ. ಇವುಗಳನ್ನು 'ಕಾಡು ಪ್ರಾಣಿಗಳು' ಎಂದು ಕರೆಯುತ್ತೇವೆ.

ಇನ್ನೂ ಕೆಲವು ಪ್ರಾಣಿಗಳು ನಮ್ಮ ಮನೆಗಳಲ್ಲಿ ಅಥವಾ ತೋಟಗಳಲ್ಲಿ ವಾಸ ಮಾಡುತ್ತವೆ. ಇವುಗಳನ್ನು 'ಸಾಕು ಪ್ರಾಣಿಗಳು' ಎಂದು ಕರೆಯುತ್ತೇವೆ.

ಪ್ರಾಣಿಗಳ ವಾಸಸ್ಥಳದ ಆಧಾರದಲ್ಲಿ ಅವುಗಳನ್ನು 'ಭೂವಾಸಿಗಳು', 'ಜಲವಾಸಿಗಳು' ಮತ್ತು 'ಉಭಯ ವಾಸಿಗಳು' ಎಂದು ವಿಂಗಡಿಸುವರು.

ಭೂ ವಾಸಿಗಳು	ಜಲ ವಾಸಿಗಳು	ಉಭಯ ವಾಸಿಗಳು
1.	1.	1.
2.	2.	2.
3.	3.	3.
4.	4.	4.

ಉತ್ತರಿಸು:

1. ನೀನು ನೋಡಿರುವ ಪ್ರಾಣಿಗಳ ಹೆಸರು :

_____ _____ _____ _____

_____ _____ _____ _____

_____ _____ _____ _____

2. ನೀನು ನೋಡದಿರುವ ಆದರೆ ಕೇಳಿರುವ ಪ್ರಾಣಿಗಳ ಹೆಸರು :

_____ _____ _____ _____

_____ _____ _____ _____

_____ _____ _____ _____

@KTBS NOT TO BE REPUBLISHED

* ನನಗೆ ಅರ್ಥವಾಗಿದೆ ☐ * ನನಗೆ ಸಹಾಯ ಬೇಕಿದೆ ☐	ಶಿಕ್ಷಕರ ಸಹಿ : ದಿನಾಂಕ :

ಚಿತ್ರ ಗಮನಿಸು. ಇವುಗಳ ಉಪಯೋಗಗಳನ್ನು ಬರೆ.



_____

_____

_____



_____

_____

_____



_____

_____

_____



_____

_____


_____



_____

_____

_____



_____

_____

_____


@KTBS NOT TO BE REPUBLISHED

* ನನಗೆ ಅರ್ಥವಾಗಿದೆ	
* ನನಗೆ ಸಹಾಯ ಬೇಕಿದೆ	

ಶಿಕ್ಷಕರ ಸಹಿ :
ದಿನಾಂಕ :

ನಾವು ವಾಸಿಸುವ ಮನೆಗಳಿಗಿಂತ ಪ್ರಾಣಿಗಳು ವಾಸಿಸುವ ಮನೆಗಳು ತೀರಾ ಭಿನ್ನ. ಕೆಲವು ಪ್ರಾಣಿಗಳು ತಮ್ಮ ಮನೆಗಳನ್ನು ತಾವೇ ಕಟ್ಟಿಕೊಂಡರೆ, ಇನ್ನು ಕೆಲವು ಪ್ರಾಣಿಗಳು ಇತರರು ಕಟ್ಟಿರುವ ಮನೆಗಳಲ್ಲಿ ವಾಸ ಮಾಡುತ್ತವೆ ಮತ್ತೆ ಕೆಲವು ಪ್ರಾಣಿಗಳಿಗೆ ನಾವು ಮನೆಗಳನ್ನು ಕಟ್ಟಿಕೊಡುತ್ತೇವೆ.

ಈ ಚಿತ್ರಗಳನ್ನು ಗಮನಿಸು.









NOT TO BE REPUBLISHED

ಯೋಚಿಸೋಣ ಹಾಗೂ ಸ್ನೇಹಿತರೊಂದಿಗೆ ಹಂಚಿಕೊಳ್ಳೋಣ:

1. ನಿನ್ನ ಮನೆಯಲ್ಲಿ ಯಾವ ಯಾವ ಪ್ರಾಣಿಗಳಿಗೆ ವಾಸಿಸಲು ಅನುಕೂಲ ಇದೆ?


2. ಹಾವು ಎಲ್ಲಿ ವಾಸಿಸುತ್ತದೆ?

3. ಕಾಡಿನಲ್ಲಿರುವ ಪ್ರಾಣಿಗಳಿಗೆ ಯಾರು ಮನೆ ಕಟ್ಟಿಕೊಡುತ್ತಾರೆ?

4. ಪ್ರಾಣಿಗಳಿಗೆ ಮನೆ ಇಲ್ಲದಿದ್ದರೆ ಏನಾಗುತ್ತಿತ್ತು?



- ಎರೆಹುಳು ತೇವಾಂಶವಿರುವ ಮಣ್ಣನ್ನು ಕೊರೆದು ಭೂಮಿಯಲ್ಲಿ ವಾಸ ಮಾಡುತ್ತದೆ.



- ಜೇಡ ಬಲೆಯನ್ನು ಕಟ್ಟಿಕೊಂಡು ರಕ್ಷಣೆ ಪಡೆಯುತ್ತದೆ.

ಮುಖವಾಡ ಮಾಡೋಣ:

ಸಾಮಗ್ರಿಗಳು: ಪೇಪರ್ ಪ್ಲೇಟ್, ಬಿಳಿ ಹಾಳೆ, ಬಣ್ಣ, ಗೊಂದು/ಅಂಟು, ದಾರ

ಕ್ರಮ:

- ನಿನಗಿಷ್ಟವಾದ ಪ್ರಾಣಿಯ ಮುಖದ ರೇಖಾಚಿತ್ರವನ್ನು ಬಿಳಿ ಹಾಳೆಯ ಮೇಲೆ ಬರೆ.
- ಸೂಕ್ತ ಬಣ್ಣ ತುಂಬು.
- ಪೇಪರ್ ಪ್ಲೇಟಿಗೆ ಅಂಟಿಸು.
- ಒಣಗಿದ ನಂತರ ಆಕಾರಕ್ಕೆ ತಕ್ಕಂತೆ ಕತ್ತರಿಸು.
- ಕಣ್ಣುಗಳಿಗಾಗಿ ಎರಡು ರಂಧ್ರವನ್ನು ಮಾಡು.
- ಮುಖವಾಡದ ಎರಡೂ ಬದಿಯಲ್ಲಿ ದಾರ ಕಟ್ಟು.
- ಸಿದ್ಧಪಡಿಸಿದ ಮುಖವಾಡವನ್ನು ಧರಿಸಿ ಅಭಿನಯಿಸು.



@KTBS NOT TO BE REPUBLISHED

ಯೋಚಿಸು..!!

ಪ್ರಾಣಿ–ಪಕ್ಷಿಗಳು ನಮ್ಮ ಹಾಗೆಯೇ ಜೀವಿಗಳು. ಅಲ್ಲವೇ? ಅವೂ ಕೂಡಾ ನಡೆಯುತ್ತವೆ, ನಿಲ್ಲುತ್ತವೆ, ನೋಡುತ್ತವೆ ಮತ್ತು ಆಹಾರ – ನೀರು ಸೇವಿಸುತ್ತವೆ. ನಾವು ಅವುಗಳ ಬಗ್ಗೆ ಪ್ರೀತಿ – ಕಾಳಜಿ ತೋರಿಸಬೇಕು ಮತ್ತು ಆರೈಕೆ ಮಾಡಬೇಕು.

ಹಾಗಾದರೆ ಇವುಗಳಿಗೆ ಹೇಗೆ ಕಾಳಜಿ ತೋರುವೆ...?

ನಾನು ಪ್ರಾಣಿ–ಪಕ್ಷಿಗಳಿಗೆ ಹೀಗೆ ಮಾಡುವೆನು.	ನಾನು ಪ್ರಾಣಿ–ಪಕ್ಷಿಗಳಿಗೆ ಹೀಗೆ ಮಾಡುವುದಿಲ್ಲ.
● ಮೀನುಗಳಿಗೆ ಆಹಾರ ಹಾಕುವೆನು.	● ನಾಯಿ ಮರಿಗೆ ಕಲ್ಲನ್ನು ಎಸೆಯುವುದಿಲ್ಲ.
● _____	● _____
● _____	● _____

ಪ್ರಾಣಿಗಳನ್ನು ಅವು ಸೇವಿಸುವ ಆಹಾರ ಪದಾರ್ಥಗಳ ಆಧಾರದ ಮೇಲೆ ಸಸ್ಯಹಾರಿಗಳು, ಮಾಂಸಾಹಾರಿಗಳು ಮತ್ತು ಮಿಶ್ರಾಹಾರಿಗಳು ಎಂದು ವಿಂಗಡಿಸಬಹುದು. ಆಹಾರಕ್ಕಾಗಿ ಒಂದು ಪ್ರಾಣಿಯು ಮತ್ತೊಂದು ಪ್ರಾಣಿಯನ್ನು ಅವಲಂಬಿಸಿದೆ. ಇದನ್ನು **"ಆಹಾರ ಸರಪಳಿ"** ಎನ್ನುವರು.



© NOT TO BE REPUBLISHED

* ನನಗೆ ಅರ್ಥವಾಗಿದೆ ☐ * ನನಗೆ ಸಹಾಯ ಬೇಕಿದೆ ☐	ಶಿಕ್ಷಕರ ಸಹಿ : ದಿನಾಂಕ :

ಓದಿ ತಿಳಿಯೋಣ:



- ಪ್ರಾಣಿಗಳ ದೇಹರಚನೆಯೂ ಕೂಡಾ ಆಹಾರ ಸೇವನೆಗೆ ಸಹಕಾರಿಯಾಗಿರುತ್ತದೆ.
- ಜಿರಾಫೆಯ ಕತ್ತು ಬಹಳ ಉದ್ದ. ಆದುದರಿಂದ ಅದು ಗಿಡ–ಮರಗಳ ಮೇಲ್ಭಾಗದಲ್ಲಿರುವ ಎಲೆಗಳನ್ನು ಕಿತ್ತು ತಿನ್ನುವುದು.
- ಹದ್ದಿನ ಕೊಕ್ಕು ಆಹಾರವನ್ನು ಕಿತ್ತು ತಿನ್ನಲು ಸಹಾಯ ಮಾಡಿದರೆ, ಅದರ ಕಾಲುಗಳು ಇಲಿ, ಹಾವು ಇತ್ಯಾದಿಗಳನ್ನು ಗಟ್ಟಿಯಾಗಿ ಹಿಡಿಯಲು ಸಹಕಾರಿಯಾಗಿವೆ.
- ಕಪ್ಪೆ, ಊಸರವಳ್ಳಿಯ ನಾಲಿಗೆಯು ಉದ್ದವಾಗಿದ್ದು, ದೂರದಲ್ಲಿರುವ ಕೀಟಗಳನ್ನು ಹಿಡಿಯಲು ಅನುಕೂಲವಾಗಿದೆ.
- ಎಮ್ಮೆ, ಹಸು, ಕುದುರೆ ಇವುಗಳ ಬಾಯಿ ಮತ್ತು ಹಲ್ಲಿನ ರಚನೆ ಅಗಲವಾಗಿದ್ದು, ಆಹಾರವನ್ನು ಚೆನ್ನಾಗಿ ಅರೆದು ತಿನ್ನಲು ಸಹಕಾರಿಯಾಗಿದೆ.







@KTBS NOT TO BE REPUBLISHED

* ಸಂಬಂಧ ಗುರುತಿಸಿ, ಉತ್ತರಿಸು:

1. ಕುರಿ : ನಡೆಯುವುದು :: ಕಪ್ಪೆ : _____
2. ಮೀನು : ಈಜುವುದು :: ಹಾವು : _____
3. ಸಿಂಹ : ಗುಹೆ :: ಕುದುರೆ : _____
4. ಮಿಡತೆ : ಹುಲ್ಲು :: ಹದ್ದು : _____
5. ಆನೆ : ಘೀಳಿಡುವುದು :: ಹುಲಿ : _____

ನಿನಗೆ ಇಷ್ಟವಾದ ಒಂದು ಪ್ರಾಣಿ ಅಥವಾ ಪಕ್ಷಿಯ ಚಿತ್ರ ರಚಿಸಿ ಬಣ್ಣ ತುಂಬು.

@KTBS
NOT TO BE REPUBLISHED

ನೀನು ಬರೆದ ಚಿತ್ರವನ್ನು ನಿನ್ನ ಸ್ನೇಹಿತನೊಂದಿಗೆ ಹಂಚಿಕೊ. ಅದು ಸೇವಿಸುವ ಆಹಾರ ಏನೆಂದು ತಿಳಿದುಕೊ.

ಓದಿ ತಿಳಿಯೋಣ: ಕಣಜ ಹುಳುಗಳು

ಕಣಜಗಳು ಹೇಗೆ ಗೂಡು ಕಟ್ಟುತ್ತದೆ?



ವಾಸ್ತವವಾಗಿ ಕಣಜಗಳು, ಜೇನುಹುಳು ಮತ್ತು ಇರುವೆಗಳ ಕುಟುಂಬಕ್ಕೆ ಸೇರಿವೆ. ಕಣಜಗಳಲ್ಲಿ ಎರಡು ಜಾತಿಗಳಿವೆ: 1) ಸಾಮಾಜಿಕ ಕಣಜಗಳು ಮತ್ತು 2) ಏಕಾಂತ ಕಣಜಗಳು.

1) ಸಾಮಾಜಿಕ ಕಣಜಗಳು : ಮರ ಮತ್ತು ಸಸ್ಯದ ನಾರುಗಳನ್ನು ಅಗಿದು, ಒಂದು ವಿಧವಾದ ಕಾಗದ ತಯಾರಿಸುತ್ತವೆ. ತಮ್ಮ ಗೂಡುಗಳನ್ನು ಈ ಕಾಗದಗಳಿಂದಲೇ ತಯಾರಿಸುತ್ತದೆ. ಕಣಜಗಳು ಗೋಡೆಗಳಿಗೆ, ಮರದ ಕೊಂಬೆಗಳಿಗೆ ಅಥವಾ ಕಲ್ಲುಗಳಿಗೆ ಅಂಟಿಕೊಂಡಿರುವಂತೆ ಗೂಡುಗಳನ್ನು ಕಟ್ಟುತ್ತವೆ.

2) ಏಕಾಂತ ಕಣಜಗಳು : ತಮ್ಮ ಗೂಡುಗಳನ್ನು ಮಣ್ಣಿನೊಳಗೆ ಉದ್ದವಾದ ಮತ್ತು ಕಿರಿದಾದ ತೂತುಗಳನ್ನು ಕೊರೆದು ಮಾಡುತ್ತವೆ.

ಕೆಲವು ಕಣಜಗಳು ಬೇಸಿಗೆಯಲ್ಲಿ ಬೇರೆಡೆ ಹಾರಾಡುತ್ತ ಚಳಿಗಾಲ ಆರಂಭವಾಗುತ್ತಿದ್ದಂತೆ ಮರಳಿ ಗೂಡಿಗೆ ಬರುತ್ತವೆ.



ಕಣಜ ಹುಳುಗಳು ಜೇನು ನೊಣಕ್ಕಿಂತಲೂ ದೊಡ್ಡವು. ಅವುಗಳ ಕೊಂಡಿಯಲ್ಲಿ ವಿಷವಿದೆ. ಅವು ಕಚ್ಚಿದರೆ ವಿಷವು ಅತಿಯಾಗಿ ಏರಿ ಪ್ರಾಣ ಕೂಡಾ ಹೋಗಬಹುದು. ಇವು ಕೆಂಪು – ಹಳದಿ – ಕಂದು ಬಣ್ಣದ ಮಿಶ್ರಣದಿಂದ ಕೂಡಿದ ಮೇಲ್ಮೈ ಹೊದಿಕೆಯನ್ನು ಹೊಂದಿದೆ.


© KTBS NOT TO BE REPUBLISHED

*****

* ನನಗೆ ಅರ್ಥವಾಗಿದೆ	
* ನನಗೆ ಸಹಾಯ ಬೇಕಿದೆ	

ಶಿಕ್ಷಕರ ಸಹಿ :
ದಿನಾಂಕ :

ನಕ್ಷೆ ಗಮನಿಸಿ, ಉತ್ತರಿಸು.



@KTBS NOT TO BE REPUBLISHED

4 ಮೋಜಿನ ಸುತ್ತಾಟ...



ಚಿಂಟು ಮೊಲವು ಎಂದಿನಂತೆ ಶಾಲೆಗೆ ಹೊರಡಲು ಸಿದ್ಧವಾಗುತ್ತಿದ್ದಾನೆ. ಅವನ ತಂದೆ–ತಾಯಿ ಅಡುಗೆ ಮನೆಯಲ್ಲಿ ತಿಂಡಿಯನ್ನು ತಯಾರಿಸುತ್ತಿದ್ದಾರೆ. ಕೆಲವೊಮ್ಮೆ ಚಿಂಟುವೂ ಕೂಡ ಅವರಿಗೆ ಸಹಾಯ ಮಾಡುತ್ತಾನೆ.

ನಿಮ್ಮ ಮನೆಯಲ್ಲಿ...?

ಚಿಂಟು, ಅಮ್ಮ ಕೊಟ್ಟ ತಿಂಡಿ ತಿಂದು ಬಾಯ್, ಬಾಯ್... ಹೇಳುತ್ತಾ ಸ್ಕೂಲ್ ಬ್ಯಾಗ್ ತೆಗೆದುಕೊಂಡು ಸೈಕಲ್ ಮೇಲೆ ಶಾಲೆಗೆ ಹೊರಟಿದ್ದಾನೆ. ಅವನೊಂದಿಗೆ ನಾವೂ ಹೊರಡೋಣವೇ...!!

@KSEEB NOT TO BE REPUBLISHED

★ ಯೋಚಿಸು – ಉತ್ತರಿಸು:

✓ ನೀನು ಶಾಲೆಗೆ ಹೇಗೆ ಹೋಗುವೆ?

_____

✓ ನಿನ್ನ ಸ್ನೇಹಿತರು ಶಾಲೆಗೆ ಹೇಗೆ ಬರುತ್ತಾರೆ?


_____

✓ ನೀನು ಶಾಲೆಗೆ ಹೋಗುವ ದಾರಿಯಲ್ಲಿ ಯಾವ ಯಾವ ವಾಹನಗಳನ್ನು ಕಾಣುವೆ?

_____

✓ ನೀನು ದೂರದ ಸ್ಥಳಗಳಿಗೆ ಹೇಗೆ ಹೋಗುವೆ?

_____



* ಈ ಚಿತ್ರವನ್ನು ಗಮನಿಸುತ್ತಾ ಚಿಂಟು ವಿವಿಧ ವಾಹನಗಳ ಪಟ್ಟಿಯನ್ನು ತಯಾರಿಸಬೇಕಿದೆ. ನೀನು ಅವನಿಗೆ ಸಹಾಯ ಮಾಡು.

ರಸ್ತೆಯ ಮೇಲೆ ಚಲಿಸುವ ವಾಹನಗಳು	ನೀರಿನಲ್ಲಿ ಚಲಿಸುವ ವಾಹನಗಳು	ಆಕಾಶದಲ್ಲಿ ಚಲಿಸುವ ವಾಹನಗಳು

NOT TO BE REPUBLISHED @KTBS

ಯೋಚಿಸು..!!



ಗಾಲಿಗಳು ಅಥವಾ ಚಕ್ರಗಳು ವಾಹನಗಳ ಚಲನೆಗೆ ಹೇಗೆ ಸಹಾಯ ಮಾಡುತ್ತವೆ? ಅವು ಇಲ್ಲದಿದ್ದರೆ ಏನಾಗುತ್ತಿತ್ತು?

ಇಲ್ಲಿ ಕೆಲವು ಸಂದರ್ಭಗಳಿಗೆ ಆಯ್ಕೆಗಳನ್ನು ನೀಡಿದೆ. ಹೆಚ್ಚು ಸೂಕ್ತವಾದ ವಾಹನವನ್ನು ಆಯ್ಕೆ ಮಾಡು.

1. ಚಿಂಟು ತನ್ನ ಸ್ನೇಹಿತನ ಮನೆಗೆ ಹುಟ್ಟು ಹಬ್ಬದಲ್ಲಿ ಭಾಗವಹಿಸಲು ಹೋಗಬೇಕಿದೆ. ಅವನು ಹೇಗೆ ಹೋಗುವುದು ಸೂಕ್ತ?

ಎ. ಬಸ್ಸು | ಬಿ. ಕಾಲ್ನಡಿಗೆ | ಸಿ. ಮೊಪೆಡ್ | ಡಿ. ಸೈಕಲ್

2. ಹದಿನಾರು ವರ್ಷದ ಒಳಗಿನ ಮಕ್ಕಳ 'ಅಂತರ್ ರಾಷ್ಟ್ರೀಯ ಕಬಡ್ಡಿ ಪಂದ್ಯಾವಳಿ'ಗೆ ಚಿಂಟು ಆಯ್ಕೆಯಾಗಿದ್ದಾನೆ. ಅವನು ರಾಜಸ್ಥಾನದ ಜೈಪುರಕ್ಕೆ ಹೋಗಬೇಕಾಗಿದೆ. ಅವನು ಯಾವ ವಾಹನದಲ್ಲಿ ಸಂಚರಿಸಬಹುದು?

ಎ. ಹಡಗು | ಬಿ. ವಿಮಾನ | ಸಿ. ಟ್ರೇನ್ | ಡಿ. ಬಸ್ಸು

3. ಪಕ್ಕದ ಊರಿನ ಜಾತ್ರೆಗೆ ಕುಟುಂಬ ಮತ್ತು ಸ್ನೇಹಿತರ ಜೊತೆಯಲ್ಲಿ ಚಿಂಟು ಹೊರಟಿದ್ದಾನೆ. ಅವರಿಗೆ ಯಾವ ವಾಹನ ಸೂಕ್ತ?

ಎ. ಬಸ್ಸು | ಬಿ. ಆಟೋ | ಸಿ. ಟ್ರೇನ್ | ಡಿ. ಸೈಕಲ್

4. 'ಇಂಧನ ಉಳಿತಾಯ ಸಪ್ತಾಹ'ದ ಶಾಲಾ ಕಾರ್ಯಕ್ರಮದಲ್ಲಿ ಭಾಷಣ ಮಾಡಿದ ತಜ್ಞರು ತಮ್ಮ ಮನೆಗೆ ಹೋಗಲು 4 ಕಿ.ಮಿ. ಕ್ರಮಿಸಬೇಕಾಗಿದೆ. ಅವರಿಗೆ ಯಾವ ವಾಹನ ಸೂಕ್ತ?

ಎ. ಮೋಟರ್ ಬೈಕ್ | ಬಿ. ಎತ್ತಿನ ಗಾಡಿ | ಸಿ. ಎಲೆಕ್ಟ್ರಿಕ್ ವಾಹನ | ಡಿ. ಸೈಕಲ್

5. ಚಿಂಟುವಿನ ಕುಟುಂಬ 'ಗುಡವಿ ಪಕ್ಷಿಧಾಮ'ಕ್ಕೆ ಒಂದು ದಿನದ ಪ್ರವಾಸ ಕೈಗೊಂಡಿತು. ಹಣದ ಉಳಿತಾಯ ಮಾಡುವ ಹಿನ್ನೆಲೆಯಲ್ಲಿ ಯಾವ ವಾಹನದ ಆಯ್ಕೆಯನ್ನು ಸೂಚಿಸುವೆ?

ಎ. ಕಾರು | ಸಿ. ಎಲೆಕ್ಟ್ರಿಕ್ ಕಾರ್ | ಬಿ. ಆಟೋ ರಿಕ್ಷಾ | ಡಿ. ಬಸ್ಸು

@KTBS NOT TO BE REPUBLISHED

* ನನಗೆ ಅರ್ಥವಾಗಿದೆ ☐
* ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :
ದಿನಾಂಕ :

ನಿನಗೆ ಇಷ್ಟವಾದ ಒಂದು ವಾಹನದ ಚಿತ್ರ ರಚಿಸಿ ಬಣ್ಣವನ್ನು ತುಂಬು.

@KTBS
NOT TO BE REPUBLISHED

ಈ ವಾಹನ ನಮಗೆ ಹೇಗೆ ಸಹಾಯಕವಾಗಿದೆ? ಎಂಬುದನ್ನು ಸ್ನೇಹಿತರೊಂದಿಗೆ ಚರ್ಚಿಸು.

ಅಂದು ಸಂಜೆ ಚಿಂಟು, ಅಜ್ಜನೊಂದಿಗೆ ಸಾರ್ವಜನಿಕ ಗ್ರಂಥಾಲಯಕ್ಕೆ ಹೊರಟನು. ದಾರಿಯಲ್ಲಿ ಅಜ್ಜ, ಚಿಂಟುವಿಗೆ ಕೆಲವು ಒಗಟುಗಳನ್ನು ಕೇಳುತ್ತಿದ್ದರು.

ಒಗಟು ಬಿಡಿಸಲು ಚಿಂಟುವಿಗೆ ಸಹಾಯ ಮಾಡೋಣ.

1. ಎರಡು ಚಕ್ರಕ್ಕೆ ಗಾಳಿಯ ತುಂಬಿ
   ಕಾಲಿನ ಬಲದಲಿ ಓಡಿಸಿ ನೋಡಿ
   'ಪರಿಸರ ಸ್ನೇಹಿ' ವಾಹನ ನಾನು
   ನನ್ನಯ ಹೆಸರು ಹೇಳುವೆಯಾ?

2. ಎತ್ತಿನ ಹೆಗಲಲಿ ನನ್ನಯ ನೊಗವು
   ರೈತನ ಬದುಕಿನ ನನ್ನಯ ಬಲವು
   ಬಂಡಿಯ ಎಳೆಯುತ ಓಡುವೆ ನಾನು
   ಗುರುತಿಸಿ ಹೇಳು ನನ್ನನು ನೀನು.

3. ಹಳಿಗಳ ಮೇಲೆ ಡಬ್ಬಿಯ ಸಾಲು
   ಜನ ಸಂಚಾರಕೆ ನಾನೇ ಮೇಲು
   ಹೊಗೆಯನ್ನುಗುಳುತ ಓಡುವೆ ನಾನು
   ನನ್ನಯ ಹೆಸರು ಹೇಳು ನೀನು.

4. ಪೆಟ್ರೋಲ್ ಡಿಸೇಲ್ ನನ್ನಯ ಊಟ
   ನಾಲ್ಕು ಚಕ್ರದ ಮೇಲೆಯೇ ಓಟ
   ಡ್ರೈವರ್ ಜೊತೆಗೆ ನನ್ನಯ ಆಟ
   ಯೋಚಿಸಿ ಹೇಳು ನಾನ್ಯಾರು?

5. ರಸ್ತೆಯ ಮೇಲೆ ಓಡುವೆ ನಾನು
   ಓಡಾಟಕೆ ಸುಲಭದ ಸಾಧನ ನಾನು
   ಆರು ಗಾಲಿಗಳೆ ನನ್ನಯ ಕಾಲು
   ಯೋಚಿಸಿ ನನ್ನಯ ಹೆಸರನು ಹೇಳು.

© @KTBS NOT TO BE REPUBLISHED

6. ರೆಕ್ಕೆಯ ಬಲದಲಿ ನನ್ನಯ ಆಟ
ಗಕ್ಕನೆ ಹಾರಿ ಗಗನದಿ ಓಟ
ಬಹು ದುಬಾರಿಯು ನನ್ನಯ ಯಾನ
ಹೆಸರು ಹೇಳಿದರೆ ನೀನೇ ಜಾಣ.

7. ತೇಲುತ, ತೇಲುತ ಸಾಗುವೆ ನಾನು
ಸಾಗರದೊಡಲಲಿ ಈಜುವ ಮೀನು
ದೂರ ದೇಶಕೆ ನನ್ನಯ ಪಯಣ
ನಾನು ಯಾರು ಹೇಳೋ ಜಾಣ.

ಹೀಗೆ ಒಗಟು ಬಿಡಿಸುತ್ತಾ, ಅವರಿಬ್ಬರೂ ಗ್ರಂಥಾಲಯ ತಲುಪಿದರು. ಅಲ್ಲಿ ಅನೇಕ ಕಥೆ ಪುಸ್ತಕಗಳನ್ನು ಕಂಡು ಚಿಂಟು ಸಂತಸಪಟ್ಟನು. ಅವನು 'ಸಿಂಹ ಮತ್ತು ಇಲಿ' ಕಥೆಯ ಪುಸ್ತಕವನ್ನು ಗಟ್ಟಿಯಾಗಿ ಓದಲು ಪ್ರಾರಂಭಿಸಿದನು. ಆಗ, ಅಜ್ಜ ಅಲ್ಲಿದ್ದ ಸೂಚನಾ ಫಲಕವನ್ನು ತೋರಿಸುತ್ತಾ, "ಮನಸ್ಸಿನಲ್ಲಿಯೇ ಓದು" ಎಂದು ಮೆಲುದನಿಯಲ್ಲಿ ಹೇಳಿದನು. ಚಿಂಟುವಿಗೆ ಕುತೂಹಲ...!!

ಈ ಚಿತ್ರಗಳನ್ನು ಗಮನಿಸಿ, ಚಿತ್ರಕ್ಕೆ ಸರಿ ಹೊಂದುವ ಸೂಚನೆಗಳನ್ನು ಊಹಿಸಿ ಬರೆಯೋಣ.



_____



_____

©KTBS NOT TO BE REPUBLISHED









@KTBS NOT TO BE REPUBLISHED

* ನನಗೆ ಅರ್ಥವಾಗಿದೆ	
* ನನಗೆ ಸಹಾಯ ಬೇಕಿದೆ	

ಶಿಕ್ಷಕರ ಸಹಿ :
ದಿನಾಂಕ :

* **ಯೋಚಿಸು: ನಾವು ಸೂಚನೆಗಳನ್ನು ಏಕೆ ಪಾಲಿಸಬೇಕು? ಹಿರಿಯರೊಂದಿಗೆ ಚರ್ಚಿಸು.**



ಒಂದು ಸ್ಥಳದಲ್ಲಿ ಕಡ್ಡಾಯವಾಗಿ ಅನುಸರಿಸಬೇಕಾದ ನಿಯಮಗಳನ್ನು ಪ್ರದರ್ಶಿಸುವ ಫಲಕಗಳೇ **"ಸೂಚನಾಫಲಕಗಳು"**. ಈ ರೀತಿಯ ಫಲಕಗಳನ್ನು ಎಲ್ಲೆಲ್ಲಿ ಹಾಕಿರುತ್ತಾರೆ. ಹೆಸರಿಸು.

ಚಿಂಟು, ಗ್ರಂಥಾಲಯದಿಂದ ಹಿಂತಿರುಗುವಾಗ ಕೆಲವು ಚಿಹ್ನೆ ಮತ್ತು ಸಂಕೇತಗಳಿರುವ ಫಲಕಗಳನ್ನು ಗಮನಿಸಿದನು. ಇವುಗಳ ಅರ್ಥವನ್ನು ತಿಳಿಯಲು ಬಯಸಿದ್ದಾನೆ.

ಖಾಲಿ ಜಾಗದಲ್ಲಿ ಸಂಕೇತಗಳ ಅರ್ಥ ಹಾಗೂ ಅವುಗಳನ್ನು ಎಲ್ಲಿ ಬಳಸುತ್ತಾರೆ ಎಂದು ಬರೆದು ಚಿಂಟುವಿಗೆ ಸಹಾಯ ಮಾಡೋಣ.


ಕ್ರ. ಸಂ	ಸಂಕೇತ	ಏನನ್ನು ಹೇಳುತ್ತದೆ?	ಬಳಸುವ ಸ್ಥಳ
1.			
2.			
3.			
4.			

@KTBS NOT TO BE REPUBLISHED

ಚಿಂಟು, ಗ್ರಂಥಾಲಯದಿಂದ ಮನೆಗೆ ಬರುವಾಗ **'ಮನೆಗಳು: ಅಲ್ಲಿ, ಇಲ್ಲಿ'** ಎಂಬ ಚಿತ್ರ ಪುಸ್ತಕವನ್ನು ತೆಗೆದುಕೊಂಡು ಬಂದನು. ಅದರಲ್ಲಿ ವಿವಿಧ ಪ್ರದೇಶದಲ್ಲಿ ಕಟ್ಟಿರುವ ಮನೆಗಳ ಚಿತ್ರಸಹಿತ ವಿವರಣೆಗಳು ಹೀಗೆ ಇದ್ದವು.

ಈ ಮನೆಗಳನ್ನು ನೀನು ನೋಡಿದ್ದರೆ ಬಾಕ್ಸ್‌ನಲ್ಲಿ ✓ ಗುರುತು ಹಾಕು ಮತ್ತು ನೋಡಿರದಿದ್ದರೆ ಹಿರಿಯರಿಂದ ಮಾಹಿತಿ ಸಂಗ್ರಹಿಸು.





ಓದಿ ತಿಳಿಯೋಣ:

ಮಾನವ, ಮೊದಲು ಗುಹೆ ಮತ್ತು ಮರದ ಪೊಟರೆಗಳಲ್ಲಿ ವಾಸಿಸುತ್ತಿದ್ದನು. ನಾಗರೀಕತೆ ಬೆಳೆದಂತೆ ತನ್ನ ವಸತಿಗಾಗಿ ಮನೆಗಳನ್ನು ನಿರ್ಮಿಸಿದನು. ಮೊದಲಿಗೆ ಮಣ್ಣು, ಕಲ್ಲು, ಇಟ್ಟಿಗೆಗಳಿಂದ ನಿರ್ಮಾಣವಾಗುತ್ತಿದ್ದ ಮನೆಗಳು ಅವಶ್ಯಕತೆಗೆ ಅನುಗುಣವಾಗಿ ವಿನ್ಯಾಸದಲ್ಲಿ ಬದಲಾವಣೆ ಕಂಡವು.

ವಾತಾವರಣದಲ್ಲಿನ ವೈಪರೀತ್ಯ, ಪ್ರಕೃತಿ ವಿಕೋಪದ ಪರಿಣಾಮಗಳನ್ನು ಎದುರಿಸಲು ಆಧುನಿಕ ವಿನ್ಯಾಸದಲ್ಲಿ ಮನೆಗಳು ತಲೆ ಎತ್ತುತ್ತಿವೆ.

ವಸತಿ ಸಮುಚ್ಚಯ ಅಥವಾ ಅಪಾರ್ಟ್‌ಮೆಂಟ್ – ಈ ಪದಗಳನ್ನು ನೀನು ಕೇಳಿರಬೇಕಲ್ಲವೇ? ಈ ಬಗ್ಗೆ ನಿನ್ನದೇ ಮಾತುಗಳಲ್ಲಿ ಸ್ನೇಹಿತರೊಂದಿಗೆ ಚರ್ಚಿಸು.

© KTBS NOT TO BE REPUBLISHED

ಹೀಗೆಯೇ ಚಿಂಟುವಿನ ಕುತೂಹಲ ಕಂಡು ಅಜ್ಜ, ವಿವಿಧ ಸ್ಥಳಗಳನ್ನು ಗುರುತಿಸಲು ಹಾಗೂ ಅವುಗಳ ಉಪಯೋಗ ಮತ್ತು ಅಲ್ಲಿ ಕೆಲಸ ಮಾಡುವ ಜನರ ಬಗ್ಗೆಯೂ ತಿಳಿಸಿದರು.

*** ಈ ಚಿತ್ರಗಳನ್ನು ಗಮನಿಸು. ಹೆಚ್ಚಿನ ಮಾಹಿತಿ ಸಂಗ್ರಹಿಸಲು ಚಿಂಟುವಿಗೆ ಸಹಾಯ ಮಾಡು.**

ಚಿತ್ರ	ಸ್ಥಳದ ಹೆಸರು	ಕೆಲಸ ಮಾಡುವವರು	ನಮಗೆ ಹೇಗೆ ಸಹಾಯ?
			
			
			

@KTBS NOT TO BE REPUBLISHED

* ನನಗೆ ಅರ್ಥವಾಗಿದೆ ☐
* ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :
ದಿನಾಂಕ :



ಮರುದಿನ ಶಾಲೆಯ ಆವರಣದಲ್ಲಿ ಚಿಂಟು ಎಲ್ಲರೊಂದಿಗೆ ಹಾಲು ಕುಡಿಯುತ್ತಿದ್ದ. ಮುಖ್ಯ ಶಿಕ್ಷಕರು ಕೋರಿಯರ್ ಬಾಯ್ ಹತ್ತಿರ ಅವರ ಮೊಬೈಲ್ ನಂಬರ್‌ಗೆ ಬಂದ OTP ಯನ್ನು (One Time Password) ಹೇಳಿದರು ಮತ್ತು ಒಂದು ಪಾರ್ಸಲನ್ನು ಪಡೆದರು. ಇದನ್ನು ಗಮನಿಸಿದ ಚಿಂಟು ಅದು ಏನಿರಬಹುದು? ಎಂದು ಯೋಚಿಸತೊಡಗಿದ. ಕುತೂಹಲ ತಡೆಯದೇ ಮುಖ್ಯ ಶಿಕ್ಷಕರಿಗೆ ಪ್ರಶ್ನೆ ಕೇಳಿಯೇ ಬಿಟ್ಟ...!!!

ಜಾಣರಾಗಿ:
OTP ಯನ್ನು ಇತರರೊಂದಿಗೆ ಹಂಚಿಕೊಳ್ಳಬೇಡಿ.

ಚಿಂಟು: ಸರ್, ಅದು ಯಾವ ಪಾರ್ಸಲ್? ಎಲ್ಲಿಂದ ಬಂತು? ಕೊಟ್ಟವರು ಯಾರು?

ಮುಖ್ಯ ಶಿಕ್ಷಕರು: ಚಿಂಟು, ಅದು ಕಿನ್ನಾಳ ಮತ್ತು ಚನ್ನಪಟ್ಟಣದ ಬೊಂಬೆಗಳ ಪಾರ್ಸಲ್. ನಿಮ್ಮ ತರಗತಿಯ ಟೀಚರ್ ಕೇಳಿದ್ದರು. ಅದಕ್ಕಾಗಿ ಕಳೆದ ವಾರ ಆನ್‌ಲೈನ್‌ನಲ್ಲಿ ಆರ್ಡರ್ ಮಾಡಿದ್ದೆ. ಕೋರಿಯರ್ ಬಾಯ್ ಅದನ್ನು ತಂದು ಕೊಟ್ಟನು.

ಚಿಂಟು: ಸರ್, ಮತ್ತೆ ಶಾಲೆಯ ಮುಂದೆ ಪೋಸ್ಟ್ ಬಾಕ್ಸ್ ಇದೆಯಲ್ಲ..?

ಮುಖ್ಯ ಶಿಕ್ಷಕರು: ಹೌದು! ಅದು, ದೂರದ ಊರಿನಲ್ಲಿರುವವರ ಜೊತೆ ಪತ್ರದ ಮೂಲಕ ಸಮಾಚಾರ ವಿನಿಮಯ ಮಾಡಿಕೊಳ್ಳಲು ಮಾತ್ರ. ಇಂದು, ಆಧುನಿಕ ತಂತ್ರಜ್ಞಾನದ ಮೂಲಕ ಸಮಾಚಾರ, ಮಾಹಿತಿ, ಅಷ್ಟೇ ಏಕೆ ಹಣ ಮತ್ತು ವಸ್ತುಗಳ ವಿನಿಮಯ ಕೂಡಾ ವೇಗವಾಗಿ ನಡೆಸಲು ಸಾಧ್ಯವಾಗಿದೆ.


© ITRT NOT TO BE REPUBLISHED















ಹಿರಿಯರಿಂದ ತಿಳಿದು, ಬರೆದು, ವ್ಯತ್ಯಾಸ ಗಮನಿಸು.

ಹಿಂದಿನ ಕಾಲದಲ್ಲಿ ಬಳಸುತ್ತಿದ್ದ ಸಂಪರ್ಕ ಸಾಧನಗಳು	ಇಂದು ಬಳಸುತ್ತಿರುವ ಸಂಪರ್ಕ ಸಾಧನಗಳು





ಆಲೋಚಿಸು...!

ಚಿತ್ರಗಳನ್ನು ಗಮನಿಸು, ಹೀಗೆ ಪ್ರಯಾಣಿಸಿದರೆ ಏನಾಗಬಹುದು!? ವಾಹನ ಸವಾರರು ಯಾವ ಯಾವ ನಿಯಮಗಳನ್ನು ಅನುಸರಿಸಬೇಕಿದೆ?





ನನ್ನ ಕಲಿಕೆಯ ಪ್ರಗತಿ.

ಕ್ರ.ಸಂ.	ಹೇಳಿಕೆಗಳು	ಹೌದು	ಇಲ್ಲ
1	ರಸ್ತೆಯ ಎಡಬದಿಯಲ್ಲಿ ಮಾತ್ರ ಸೈಕಲ್ ಸವಾರಿ ಮಾಡುವೆನು.		
2	ಬಸ್ಸಿನಲ್ಲಿ ಹೋಗುವಾಗ ಕೈಗಳನ್ನು ಕಿಟಕಿಯಿಂದ ಹೊರಗೆ ಚಾಚುವುದಿಲ್ಲ.		
3	ವಾಹನ ಸವಾರರು ಅನುಸರಿಸಬೇಕಾದ ನಿಯಮಗಳನ್ನು ಹೇಳುವೆನು.		
4	ಹಿರಿಯರ ಅನುಮತಿ ಪಡೆದು ಅಗತ್ಯವಿದ್ದಾಗ ಮಾತ್ರ ಮೊಬೈಲ್ ಬಳಕೆ ಮಾಡುವೆನು.		
5	ಸಂಪರ್ಕ ಸಾಧನಗಳ ಬಗ್ಗೆ ತಿಳಿದಿರುವೆನು.		
6	ಸೂಚನಾ ಫಲಕಗಳನ್ನು ಓದಿಕೊಳ್ಳುವೆನು ಮತ್ತು ಅನುಸರಿಸುವೆನು.		
7	ಸಂಕೇತಗಳ ಮೂಲಕ ಸೂಚನೆಗಳನ್ನು ತಿಳಿದು ಪಾಲಿಸುವೆನು.		

* ನನಗೆ ಅರ್ಥವಾಗಿದೆ ☐
* ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :
ದಿನಾಂಕ :


NOT TO BE REPUBLISHED @KTBS

ಝೀಬ್ರಾ ಕ್ರಾಸಿಂಗ್: (Zebra crossing)



ಇರುವೆಗಳ ಗುಂಪೊಂದು ಆಹಾರ ಹುಡುಕುತ್ತಾ ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೊರಟಿದ್ದವು. ಮೊದಲೇ, ಅವು ಸಾಲಿನಲ್ಲಿ ಮಾತ್ರ ಚಲಿಸುವುವು. ಅವುಗಳಿಗೆ ಅಡ್ಡಲಾಗಿ ದೊಡ್ಡ ರಸ್ತೆಯೊಂದು ಎದುರಾಯಿತು. ರಸ್ತೆ ದಾಟಲು ಪ್ರಯತ್ನಿಸುವಾಗ ವಾಹನಗಳ ಅಡ್ಡಾದಿಡ್ಡಿ ಚಲನೆ ಅವುಗಳಿಗೆ ಗಾಬರಿ ಉಂಟುಮಾಡಿತು.

ಇವುಗಳ ಪೇಚಾಟವನ್ನು ದೂರದಿಂದ ಗಮನಿಸುತ್ತಿದ್ದ 'ಝೀಬ್ರಾ' ಹತ್ತಿರ ಬಂದು "ಏನಾಗಬೇಕಿದೆ?" ಎಂದು ಕೇಳಿತು. ಇರುವೆಗಳ ನಾಯಕ, 'ನಾವು ರಸ್ತೆ ದಾಟಬೇಕಿದೆ. ಆದರೆ ಈ ವಾಹನಗಳ ರಭಸದಿಂದ ದಾಟಲಾಗುತ್ತಿಲ್ಲ.' ಎಂದಿತು. "ಓ, ಇದೇ ನಿಮ್ಮ ಸಮಸ್ಯೆಯೇ? ಸ್ವಲ್ಪ ನಿಲ್ಲಿರಿ. ನಾನು ನಿಮಗೆ ಸಹಾಯ ಮಾಡುತ್ತೇನೆ." ಎಂದು ಸ್ವಲ್ಪಹೊತ್ತು ಯೋಚಿಸಿ, ರಸ್ತೆಯ ನಡುವೆ ಹೋಗಿ ಝೀಬ್ರಾ ನಿಂತಿತು. ರಸ್ತೆಯಲ್ಲಿ ಝೀಬ್ರಾ ನಿಂತಿದ್ದರಿಂದ ಎಲ್ಲಾ ವಾಹನಗಳು ಕೂಡಲೇ ನಿಂತವು. ಇರುವೆಗಳು ಸಾಲಾಗಿ ರಸ್ತೆಯನ್ನು ದಾಟಿದವು.





NOT TO BE REPUBLISHED © KSTBS



ಹೀಗೆ ಮಾಡು:

ಮಾಲಿ ಬೆಂಕಿ ಪೊಟ್ಟಣ, ಬೆಂಕಿ ಕಡ್ಡಿಗಳು, ಟೂತ್ ಪೇಸ್ಟ್ ಬಾಕ್ಸ್ ಇತ್ಯಾದಿಗಳಿಂದ ಆಟಿಕೆಗಳನ್ನು ಚಿಂಟು ತಯಾರಿಸಿದ್ದಾನೆ. ನೀನೂ ತಯಾರಿಸಿ ಆಟ ಆಡು. (ಬೆಂಕಿ ಕಡ್ಡಿ ಬಳಸುವಾಗ ಎಚ್ಚರಿಕೆ ವಹಿಸು.)

ಚಟುವಟಿಕೆ–1 : ಈ ಸಂಕೇತಗಳನ್ನು ಗಮನಿಸು. ಇವುಗಳ ಅರ್ಥ ಬರೆ.

@KTBS NOT TO BE REPUBLISHED

ಚಟುವಟಿಕೆ–2: ಈ ಸ್ಥಳಗಳಲ್ಲಿ ಯಾವ ಯಾವ ಸೂಚನೆಗಳು ಇರಬೇಕು ಎಂದು ಪಟ್ಟಿಮಾಡು.

(ಅ) ಆಸ್ಪತ್ರೆ

1. _____

2. _____

(ಬ) ಸಾರ್ವಜನಿಕ ಗ್ರಂಥಾಲಯ

1. _____

2. _____

ಚಟುವಟಿಕೆ–3:

ಚಿಂಟು ಹೋಗುವ ದಾರಿಯಲ್ಲಿ ಕಾಣುವ ಸೂಚನಾ ಫಲಕಗಳನ್ನು ಹೆಸರಿಸು ಹಾಗೂ ಅವು ಏನನ್ನು ಹೇಳುತ್ತವೆ ಎಂಬುದನ್ನು ನಿನ್ನ ಸ್ನೇಹಿತರೊಂದಿಗೆ ಹಂಚಿಕೊ.



@KTBS NOT TO BE REPUBLISHED

* ಚಿಂಟುವಿನ ದಾರಿಯಲ್ಲಿ ಕಾಣುವ ಸೂಚನಾ ಫಲಕಗಳು.

1. _____

2. _____

3. _____

ಯೋಚಿಸು:

ನೀನು, ನಿನ್ನ ಊರಿನ ಅಥವಾ ವಾರ್ಡಿನ ದಾರಿಯಲ್ಲಿ ಹೋಗುವಾಗ ಯಾವ ಯಾವ ಸೂಚನಾ ಫಲಕಗಳನ್ನು ನೋಡಿರುವೆ? ಅಥವಾ ನೋಡಲು ಬಯಸುವೆ?

* ನನಗೆ ಅರ್ಥವಾಗಿದೆ ☐ * ನನಗೆ ಸಹಾಯ ಬೇಕಿದೆ ☐	ಶಿಕ್ಷಕರ ಸಹಿ : ದಿನಾಂಕ :

ಸಮೀಕ್ಷೆ:

ನೀನು ನೋಡಿರುವ, ಪ್ರಯಾಣಿಸಿರುವ ವಾಹನಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸು.

ಕ್ರ. ಸಂ.	ವಾಹನದ ಹೆಸರು	ಚಕ್ರಗಳ ಸಂಖ್ಯೆ	ಆಸನಗಳ ಸಂಖ್ಯೆ	ನೀನು ಪ್ರಯಾಣಿಸಿರುವೆಯಾ?
1.				
2.				
3				
4.				
5.				
6.				
7.				

@KTBS NOT TO BE REPUBLISHED



ಒಮ್ಮೆ, ಚಿಂಟು ತನ್ನ ಸೈಕಲ್‌ನಲ್ಲಿ ಗೆಳೆಯರೊಂದಿಗೆ ಪಕ್ಕದೂರಿನ ಜಾತ್ರೆಗೆ ಹೊರಟನು. ದಾರಿಯಲ್ಲಿ ಎಳನೀರು ಮಾರುತ್ತಿದ್ದ ವ್ಯಕ್ತಿಯನ್ನು ಕಂಡನು. ಮುಂದೆ ಸಾಗುತ್ತಿದ್ದಂತೆ ರಸ್ತೆ ಬದಿಯಲ್ಲಿ ಪೈಪ್‌ಲೈನ್ ಹಾಕಲು ಕೆಲಸ ಮಾಡುತ್ತಿದ್ದ ಕುಟುಂಬವೊಂದು ಟೆಂಟ್ ಹಾಕಿದ್ದನ್ನೂ ನೋಡಿದನು. ರಸ್ತೆಯ ಮತ್ತೊಂದು ಬದಿಯಲ್ಲಿರುವ ಪೆಟ್ರೋಲ್ ಬಂಕ್‌ನಲ್ಲಿ ವಾಹನಗಳ ದಟ್ಟಣೆ ಕಂಡಿತು.

ಅಲ್ಲಿಂದ ಮುಂದಕ್ಕೆ ಹೊರಟ ಚಿಂಟು ಮತ್ತು ಗೆಳೆಯರು ಜಾತ್ರೆಯನ್ನು ನೋಡಿದರು. ಅಲ್ಲಿನ ಅಲಂಕಾರವನ್ನು ನೋಡಿ ಖುಷಿ ಪಟ್ಟರು. ಮೇರಿ–ಗೋ–ರೌಂಡ್, ಪುಟಾಣಿ ಟ್ರೈನ್, ಕುದುರೆ ಸವಾರಿ, ಕ್ಯಾಚಿಂಗ್ ಫಿಶ್, ಶೂಟಿಂಗ್ ಇತ್ಯಾದಿ ವಿವಿಧ ಬಗೆಯ ಆಟಗಳನ್ನು ಆಡಿದರು. ಸ್ವಲ್ಪ ದೂರದಲ್ಲಿ ಮಾರುತ್ತಿದ್ದ ಕಬ್ಬಿನ ಹಾಲನ್ನು ಅವರೆಲ್ಲರೂ ಕುಡಿದರು. ತಮ್ಮಲ್ಲಿರುವ ದುಡ್ಡನ್ನು

© NOT TO BE REPUBLISHED

ಲೆಕ್ಕ ಹಾಕಿ ತಮಗಿಷ್ಟವಾದ ಆಟಿಕೆಗಳನ್ನು ಕೊಂಡರು. ಜಾತ್ರೆ ಮುಗಿಸಿ ಹಿಂತಿರುಗಿ ಬರುವಾಗ ಹತ್ತಿರದಲ್ಲಿದ್ದ ಬಸ್ ನಿಲ್ದಾಣವನ್ನು ಕಂಡರು. ನಿಲ್ದಾಣದಲ್ಲಿ ವ್ಯವಸ್ಥೆ ಮಾಡಲಾಗಿದ್ದ ಸೈಕಲ್ ಸ್ಟ್ಯಾಂಡ್‌ನಲ್ಲಿ ತಮ್ಮೆಲ್ಲರ ಸೈಕಲ್‌ಗಳನ್ನು ನಿಲ್ಲಿಸಿದರು. ಇದಕ್ಕಾಗಿ ಪ್ರತಿಯೊಬ್ಬರೂ ಹಣ ನೀಡಿ, ರಶೀದಿಯನ್ನು ಪಡೆದುಕೊಂಡರು. ಆದರೆ ಕೆಲವರು ಮಾತ್ರ ಹಣ ನೀಡದೇ ಅಲ್ಲಿದ್ದ ಕ್ಯೂ.ಆರ್. ಕೋಡ್ ಒಂದನ್ನು ಸ್ಕ್ಯಾನ್ ಮಾಡುತ್ತಾ, ಪಾರ್ಕಿಂಗ್ ಶುಲ್ಕವನ್ನು ಡಿಜಿಟಲ್ ಮೂಲಕ ಪಾವತಿ ಮಾಡುತ್ತಿರುವುದು ಕಂಡುಬಂದಿತು. ಇದನ್ನೆಲ್ಲಾ ಗಮನಿಸಿದ ನಂತರ ಅಲ್ಲಿದ್ದ ಹೋಟೆಲ್‌ನಲ್ಲಿಯೇ ಊಟ ಮಾಡಿದರು. ಸ್ವಲ್ಪ ಹೊತ್ತು ತಿರುಗಾಡುತ್ತಾ ವಿಶ್ರಮಿಸಿದರು. ಪುನಃ ಸೈಕಲ್ ಸ್ಟ್ಯಾಂಡ್‌ಗೆ ಹೋಗಿ ರಶೀದಿಯನ್ನು ಕೊಟ್ಟು, ತಮ್ಮ ತಮ್ಮ ಸೈಕಲ್‌ಗಳನ್ನು ಏರಿ ಮನೆ ಕಡೆಗೆ ಹೊರಟರು.

ದಾರಿಯಲ್ಲಿ ಕಂಡ ತಂಗುದಾಣ, ಟೆಂಟ್, ಬಸ್ಸು ನಿಲ್ದಾಣ, ಪೆಟ್ರೋಲ್ ಬಂಕ್ ಇತ್ಯಾದಿಗಳ ಬಗ್ಗೆ ಅವರವರೇ ಮಾತನಾಡುತ್ತಾ ಸುರಕ್ಷಿತವಾಗಿ ತಮ್ಮ ತಮ್ಮ ಮನೆಗಳನ್ನು ತಲುಪಿದರು.

NOT TO BE REPUBLISHED @KTBS

ಯೋಚಿಸಿ – ಉತ್ತರಿಸು:

1. ರಸ್ತೆ ಬದಿಯಲ್ಲಿ ಎಳನೀರು, ಕಬ್ಬಿನ ಹಾಲು, ಹಣ್ಣುಗಳನ್ನು ಮಾರಾಟ ಮಾಡುತ್ತಾರೆ. ಏಕೆ?
2. ಹಣ ಕೊಟ್ಟು ಪಾರ್ಕಿಂಗ್ ಮಾಡುವ ಸ್ಥಳಗಳನ್ನು ಪಟ್ಟಿ ಮಾಡು.
3. ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡುವವರಿಗೆ ಯಾವ ಯಾವ ರೀತಿಯ ಕೆಲಸಗಳು ಇರುತ್ತವೆ?
4. ಬಸ್ ನಿಲ್ದಾಣದಲ್ಲಿ ಯಾವ ರೀತಿಯ ಕೆಲಸಗಳನ್ನು ಮಾಡುವವರು ಇರುತ್ತಾರೆ?

ಸುಗಮಕಾರರಿಗೆ ಸೂಚನೆ:

ಪ್ರತಿ ಮಗುವಿಗೆ ಇಂತಹ ಪ್ರಶ್ನೆಗಳನ್ನು ಕೇಳುತ್ತಾ ಮೌಖಿಕವಾಗಿ ಉತ್ತರಿಸಲು ಅನುಕೂಲ ಮಾಡು.